## ಅಧ್ಯಾಯ 11

# ಜನಾಂಗಗಳ ಹಬ್ಬುವಿಕೆ

11ನೇ ಅಧ್ಯಾಯದ ಮೊದಲನೆಯ ಭಾಗವು ಬಾಬೆಲ್ ಗೋಪುರದ ಕಥೆಯನ್ನು ಹೇಳುತ್ತದೆ. ಪ್ರಳಯದ ನಂತರ, ಗರ್ವಿಷ್ಠರಾದ ಮನುಷ್ಯರು ಒಂದು ಗೋಪುರವನ್ನು ಕಟ್ಟುವದಕ್ಕೆ ಪ್ರಯತ್ನಿಸಿದರು ಮತ್ತು ತಮಗೋಸ್ಕರ ಹೆಸರನ್ನು ಮಾಡಿಕೊಳ್ಳಲು ಬಯಸಿದರು (11:1-4). ಹೇಗೂ, ದೇವರು ಅವರ ಭಾಷೆಗಳನ್ನು ಗಲಿಬಿಲಿಗೊಳಿಸಿ, ಅವರೆಲ್ಲರನ್ನೂ ಭೂಮಿಯಲ್ಲೆಲ್ಲಾ ಹರಡಿಕೊಳ್ಳುವಂತೆ ಮಾಡುವ ಮೂಲಕ ಅವರ ಯೋಜನೆಗಳಿಗೆ ಭಂಗ ತಂದನು (11:5-9). ಅಧ್ಯಾಯದ ಎರಡನೆಯ ಭಾಗವು ಶೇಮನ ವಂಶಾವಳಿಯನ್ನು ತಿಳಿಸುತ್ತದೆ, ತೇರಹ ಮತ್ತು ಆತನ ಮೂವರು ಪುತ್ರರೊಂದಿಗೆ ಸಮಾಪ್ತಿಗೊಳ್ಳುತ್ತದೆ (11:10-32). ಆ ಪುತ್ರರಲ್ಲಿ ಒಬ್ಬನು ಅಬ್ರಹಾಮನಾಗಿದ್ದನು, ಈತನ ಮೂಲಕವೇ ದೇವರು ತನ್ನ ಕೃಪೆಯನ್ನು ಸುರಿಸಲಿದ್ದನು.

### ಮಹಿಮೆಯನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಬೃಹತ್ ಗೋಪುರದ ನಿರ್ಮಾಣ (11:1-4)

**[1]ಲೋಕದವರೆಲ್ಲರಿಗೂ ಒಂದೇ ಭಾಷೆ ಇತ್ತು. ಭಾಷಾಭೇದವೇನೂ ಇರಲಿಲ್ಲ. [2]ಅವರು ಪೂರ್ವದಿಕ್ಕಿಗೆ ಮುಂದೆ ಮುಂದೆ ಪ್ರಯಾಣ ಮಾಡುತ್ತಿರುವಾಗ ಶಿನಾರ್ ದೇಶದಲ್ಲಿ ಬೈಲುಸೀಮೆ ಸಿಕ್ಕಲು ಅಲ್ಲೇ ವಾಸಮಾಡಿಕೊಂಡು ತಮ್ಮ ತಮ್ಮೊಳಗೆ - [3]ಬನ್ನಿ, ಒಳ್ಳೊಳ್ಳೇ ಸುಟ್ಟ ಇಟ್ಟಿಗೆಗಳನ್ನು ಮಾಡೋಣ; [4]ಒಂದು ಪಟ್ಟಣವನ್ನೂ ಆಕಾಶವನ್ನು ಮುಟ್ಟುವ ಗೋಪುರವನ್ನೂ ಕಟ್ಟಿ ದೊಡ್ಡ ಹೆಸರನ್ನು ಪಡೆಯೋಣ; ಹೀಗೆ ಮಾಡಿದರೆ ಭೂಮಿಯ ಮೇಲೆಲ್ಲಾ ಚದರುವದಕ್ಕೆ ಆಸ್ಪದವಾಗುವದಿಲ್ಲ ಅಂದುಕೊಂಡರು. ಕಟ್ಟುವಾಗ ಕಲ್ಲಿಗೆ ಬದಲಾಗಿ ಇಟ್ಟಿಗೆಯನ್ನೂ ಸುಣ್ಣಕ್ಕೆ ಬದಲಾಗಿ ಕಲ್ಲರಗನ್ನೂ ಉಪಯೋಗಿಸಿದರು.**

ವಿನ್ಯಾಸ, ಶೈಲಿ, ಭಾಷೆ, ಮತ್ತು ದ ಬಳಕೆ ಇವುಗಳ ಪ್ರಕಾರವಾಗಿ, ಬಾಬೆಲ್ ಗೋಪುರದ ಚರಿತ್ರೆಯು ಕಥಾ-ನಿರೂಪಣೆಯ ಒಂದು ಪರಿಣಿತಿಭರಿತ ಉದಾಹರಣೆಯಾಗಿದೆ. ನೋಹ ಮತ್ತು ಪ್ರಳಯದ ಕಥೆಯಂತಲ್ಲದೆ, ಬಾಬೆಲ್ ಗೋಪುರದ ಕುರಿತಾದ ಬೈಬಲಿನ ಚರಿತ್ರೆಯನ್ನು ಹೋಲುವಂಥ ಮತ್ತೊಂದು ಚರಿತ್ರೆಯು ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಕಂಡು ಹಿಡಿಯಲ್ಪಟ್ಟಿರುವದಿಲ್ಲ. ಇದನ್ನು ಅತ್ಯಂಥ ನಿಕಟವಾಗಿ ಹೋಲುವಂಥ ಚರಿತ್ರೆಯೆಂದರೆ *Enuma Elish* or *The Creation Epic* ಎಂದು ಪರಿಚಿತವಿರುವ ಪ್ರಾಚೀನ ಮೆಸಪೋತಾಮ್ಯದ ಬರಹಯಾಗಿದೆ. ಅದು ದೇವರುಗಳು ಬಾಬಿಲೋನ ಮತ್ತು ಅದರ ಬೃಹತ್ ದೇವಸ್ಥಾನದ-ಗೋಪುರವನ್ನು (ವೇದಿಕೆ-ಗೋಪುರ ಅಥವಾ ಹಂತಗೋಪುರದ ದೇವಾಲಯ) ನಿರ್ಮಾಣ ಮಾಡುವದರ ಬಗ್ಗೆ ತಿಳಿಸುತ್ತದೆ, ಅದರೊಳಗೆ ದೇವರುಗಳ ರಾಜನಾದ ಮರ್ದುಕ್‌ಗೋಸ್ಕರ ಒಂದು ಸಿಂಹಾಸನವಿತ್ತು. ಅದು ದೇವರುಗಳಿಗೆ ಸಂಭ್ರಮಾಚಾರಣೆಯನ್ನು

ಮಾಡುವದಕ್ಕೋಸ್ಕರ ಆಕಾಶದಷ್ಟು ಎತ್ತರ ಕಟ್ಟಲ್ಪಟ್ಟಿದ್ದೆಂದು ಹೇಳಲಾಗುವ "ಪವಿತ್ರಾಲಯ" ಆಗಿತ್ತು, ಆ ಸಂಭ್ರಮಾಚಾರಣೆಯಲ್ಲಿ ಹಬ್ಬದ ಕುಡಿತ ಮತ್ತು ಔತಣ ಮಾತ್ರವಲ್ಲದೆ ಹೊಸ ವರ್ಷದ ಹಬ್ಬದಲ್ಲಿ ರಾತ್ರಿಯೆಲ್ಲಾ ವಿಶ್ರಾಂತಿ ಇವುಗಳು ಇರುತ್ತಿದ್ದವು.[1]

ಅದರ ಜೊತೆಗೆ, ಒಂದು ಸುಮೆರಿಯನ್ ಬರಹಯು[2] ಎಲ್ಲಾ ಮನುಷ್ಯರು ಒಂದೇ ಭಾಷೆಯನ್ನು ಮಾತಾಡಿದರು ಅಥವಾ ಮಾತಾಡುವರು ಎಂಬುದಾಗಿ ತಿಳಿಸುತ್ತದೆ, ಆದರೆ ಮಾನವರ ಸಾಮಾನ್ಯ ಭಾಷೆಯು ಒಂದು ಮಂದವಾದ ಗತಕಾಲದಲ್ಲಿನ ಅನುಭವವೋ ಅಥವಾ ದೂರದ ಭವಿಷ್ಯದಲ್ಲಿ ಎದುರುನೋಡತಕ್ಕದ್ದಾಗಿತ್ತೋ ಎಂಬುದರ ಬಗ್ಗೆ ಒಮ್ಮತವು ಮೂಡಿ ಬಂದಿರುವದಿಲ್ಲ. ಸುಮೆರಿಯನ್ನಿನ ಚರಿತ್ರೆಯು ಹೇಗೆ ಅರ್ಥನಿರೂಪಣೆ ಮಾಡಲ್ಪಡುತ್ತದೆ ಎಂಬುದನ್ನಾಧರಿಸಿ, ಭಾಷೆಯ ವೈವಿಧ್ಯತೆಯು ಎನ್ಲಿಲ್ ಮತ್ತು ಎಂಕೀ ಎಂಬ ಇಬ್ಬರು ದೇವರುಗಳ ನಡುವಿನ ವೈರತ್ವದ ಫಲಿತವಾಗಿತ್ತೆಂದು, ಅಥವಾ ಅದು ಮಹಾ ದೇವರಾದ ಎನ್ಲಿಲ್‌ನನ್ನು ಆರಾಧಿಸದಂತೆ ಮನುಷ್ಯರಿಗೆ ತಡೆಯಾಗುತ್ತಿದ್ದ ಕಾರಣ ದೇವರುಗಳಿಗೆ ಬೇಸರವನ್ನುಂಟು ಮಾಡಿತ್ತದೆಂದು ಹೇಳಲಾಗುತ್ತದೆ.[3]

ಈ ಎರಡೂ ಬರಹಗಳು ಸಹ ಬೈಬಲಿನ ಚರಿತ್ರೆಗಿಂತ ಬಹಳ ವ್ಯತ್ಯಾಸವಾಗಿರುತ್ತವೆ. ಬಾಬಿಲೋನಿನಲ್ಲಿನ ಕಥೆಯು ಹೇಳುವದೇನೆಂದರೆ ದೇವರುಗಳು ಒಂದು ವರ್ಷದ ಕಾಲ ಇಟ್ಟಿಗೆಗಳನ್ನು ರೂಪಿಸಿದರು ಮತ್ತು ಬಳಿಕ ಅವರ ಸಂಭ್ರಾಚಾರಣೆ ಮತ್ತು ವಿಶ್ರಾಂತಿಗೋಸ್ಕರ ಗೋಪುರವನ್ನು ನಿರ್ಮಿಸಿದರು. ಆದಿಕಾಂಡದಲ್ಲಿ, ಇಟ್ಟಿಗೆಯನ್ನು ಆಕಾರಗೊಳಿಸಿದವರು ಮಾನವರು ಮತ್ತು ಒಗ್ಗಟ್ಟನ್ನು ಕಾಪಾಡಿಕೊಳ್ಳಲು ಹಾಗೂ ತಮಗೋಸ್ಕರ ಹೆಸರನ್ನು ಸ್ಥಾಪಿಸಿಕೊಳ್ಳಲು ಗೋಪುರವನ್ನು ಕಟ್ಟುವ ವ್ಯರ್ಥ ಪ್ರಯತ್ನ ಮಾಡಿದರೆಂಬುದು ಸ್ಪಷ್ಟವಾಗಿರುತ್ತದೆ. ಗೋಪುರದ ಘಟನಾವಳಿಯು ಸ್ಪಷ್ಟವಾಗಿ ತಮ್ಮನ್ನು ಹೆಚ್ಚಿಸಿಕೊಳ್ಳಲು ಮತ್ತು ಬಹುಶಃ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂಬುದಕ್ಕಾಗಿ ದೇವರಿಗೂ ಮನುಷ್ಯರಿಗೂ ನಡುವೆ ಸೇತುವೆಯನ್ನು ನಿರ್ಮಿಸಿಕೊಳ್ಳಲು ಮನುಷ್ಯರು ಮಾಡಿದ ಪ್ರಯತ್ನದ ರೀತಿಯಾಗಿತ್ತು. ಅಷ್ಟುಮಾತ್ರವಲ್ಲದೆ, ಭಾಷೆಯಲ್ಲಿನ ವೈವಿಧ್ಯತೆಯು ಸತ್ಯ ದೇವರಿಂದಾದ ನ್ಯಾಯತೀರ್ಪಿನ ಫಲಿತವಾಗಿತ್ತೇ, ಹೊರತು ಅದು ದೇವರುಗಳ ನಡುವಿನ ಪೈಪೋಟಿಯಿಂದಾಗಿ ಅಲ್ಲ ಎಂಬುದು ಸ್ಪಷ್ಟವಾಗಿದೆ. ಭಾಷೆಗಳ ಗಲಿಬಿಲಿಯು ಮಾನವ ದುರಹಂಕಾರ ಮತ್ತು ಗರ್ವಕ್ಕಾಗಿ ಉಂಟಾದ ದೈವಿಕ ದಂಡನೆಯಾಗಿತ್ತು, ಮಾತ್ರವಲ್ಲದೆ ಪ್ರಳಯದ ನಂತರದಲ್ಲಿ ನೀಡಲಾಗಿದ್ದ ದೈವಿಕ ಆದೇಶಕ್ಕನುಗುಣವಾಗಿ (9:1, 7) ಹರಡಿ ಭೂಮಿಯೆಲ್ಲೆಲ್ಲಾ ತುಂಬಿಕೊಳ್ಳುವದಕ್ಕೆ ನಿರಾಕರಿಸಿದ್ದಕ್ಕೆ ಉಂಟಾದ ದಂಡನೆಯಾಗಿತ್ತು.

**ವಚನ 1.** ಅಧ್ಯಾಯವು **ಲೋಕದವರೆಲ್ಲರಿಗೂ ಒಂದೇ ಭಾಷೆ** ಬಳಕೆಯಲ್ಲಿ **ಇತ್ತು** ಎಂಬುದರೊಂದಿಗೆ ಆರಂಭವಾಗುತ್ತದೆ; ಹೇಗೂ, 10ನೇ ಅಧ್ಯಾಯವು ಮನುಷ್ಯರು ಬಹು ಭಾಷೆಯನ್ನಾಡುತ್ತಿದ್ದರು ಎಂಬುದಾಗಿ ಮೂರು ಸಾರಿ ಹೇಳಿರುತ್ತದೆ (10:5, 20, 31). ಈ ಮುಂಚೆ ನಾವು ಗಮನಿಸಿರುವ ಹಾಗೆಯೇ, ಯೆಫೆತ್, ಹಾಮ್, ಮತ್ತು ಶೆಮ್ ಇವರ ವಂಶಾವಳಿಗಳು ಆಯ್ದ ವ್ಯಕ್ತಿಗಳನ್ನು ಮಾತ್ರವೇ ಪ್ರಸ್ತಾಪಿಸುತ್ತವೆ ಮತ್ತು ಸಮಗ್ರವಾಗಿರುವದಿಲ್ಲ. ಯೆಫೆತ್ ಮತ್ತು ಹಾಮನ ಸಂತತಿಯವರು ಕ್ರಮವಾಗಿ ಮೂರು ಮತ್ತು ನಾಲ್ಕು ತಲೆಮಾರುಗಳ ವರೆಗೆ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿದ್ದಾರೆ, ಶೇಮನ ವಂಶವಾದರೋ ಆರು ತಲೆಮಾರುಗಳವರು ಯಾರೆಂದು ತಿಳಿಸಲ್ಪಟ್ಟಿರುತ್ತದೆ.

ಮೊದಲ ಎರಡು ವಂಶಾವಳಿಗಳ ಅಂತ್ಯದಲ್ಲಿರುವ ಸಾರಾಂಶದ ಹೇಳಿಕೆಯನ್ನು ಶೇಮನ ವಂಶಾವಳಿಯ ಅಂತ್ಯದಲ್ಲಿರುವ ಹೇಳಿಕೆಯಂತೆಯೇ ಅರ್ಥಮಾಡಿಕೊಳ್ಳತಕ್ಕದ್ದು. ಕಡೆಯ

ವಂಶಾವಳಿಯು ಪೆಲೆಗನ ದಿನಗಳಲ್ಲಿಯೇ "ಭೂಮಿಯ ಜನಗಳು ವಿಂಗಡವಾದವು" ಎಂದು ಹೇಳುತ್ತದೆ (10:25), ಮತ್ತು ಇದು ಬಾಬೆಲ್ ಗೋಪುರದ ನಂತರದಲ್ಲಿ ಮಾನವರು ಹರಡಿಕೊಂಡ ವಿವಿಧ ಕ್ಷೇತ್ರಗಳನ್ನು ಸೂಚಿಸತಕ್ಕದ್ದು. ಲೇಖಕನು ಅವರ "ಕುಲಗಳು," ಅವರು "ಭಾಷೆಗಳು" (10:20, 31) ಪ್ರಕಾರವಾಗಿ ಬಣ್ಣನೆಯನ್ನು ನೀಡುವ ಮೂಲಕ ಚರಿತ್ರೆಯನ್ನು ಸಾರಾಂಶಗೊಳಿಸುವದಕ್ಕೆ ಮುನ್ನ, ಪೆಲೆಗನನ್ನು ದಾಟಿ ಹೋಗಿ ಶೇಮನ ವಂಶದಲ್ಲಿನ ಇನ್ನಷ್ಟು ಹೆಸರುಗಳನ್ನು ನೀಡುತ್ತಾನೆ.

ಲೇಖಕನ ಉದ್ದೇಶವು ಯೆಫೆತ ಮತ್ತು ಹಾಮನ ವಂಶದವರು ನಿಖರವಾಗಿ ಯಾವಾಗ ಬೇರೆ ಬೇರೆ ಭಾಷೆಗಳನ್ನಾಡಿದರು ಎಂಬುದಾಗಿ ಒಂದು ಕಟ್ಟುನಿಟ್ಟಿನ ಕಾಲಾನುಕ್ರಮದ ಚರಿತ್ರೆಯನ್ನು ತಿಳಿಸುವದಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆತನು ಕೇವಲ ರೀತಿಯಲ್ಲಿಷ್ಟೆ ಮುಕ್ತಾಯಗೊಳಿಸಿದನು, ಏನೆಂದರೆ ವಂಶಾವಳಿಯ ಅಂತ್ಯದಲ್ಲಿ - ಎಷ್ಟೇ ತಲೆಮಾರುಗಳು ಸೇರಿಸಲ್ಪಟ್ಟಿದ್ದರೂ ಸರಿಯೇ - ನೋಹನ ಪುತ್ರರ ಸಂತತಿಯು ಕುಲ, ಭಾಷೆ, ದೇಶಗಳು, ಮತ್ತು ಜನಾಂಗಗಳ ಪ್ರಕಾರವಾಗಿ ಭಿನ್ನವಾಗಿ ಗುರುತಿಸಲ್ಪಟ್ಟಿದ್ದವು ಎಂಬುದೆ. ನೋಹನ ಪುತ್ರರ ವಂಶಾವಳಿಗಳಲ್ಲಿ ಯಾರಿದ್ದಾರೆಂಬುದನ್ನು ತಿಳಿಸಿ ಮುಗಿಸಿದ ಬಳಿಕ, ಲೇಖಕನು ಬೈಬಲಿನ ಕಥೆಯನ್ನು ಮುಂದುವರೆಸುವದಕ್ಕೆ ಸಿದ್ಧನಾಗಿದ್ದನು.

**ವಚನ 2.** ಪ್ರಳಯದ ನಂತರದಲ್ಲಿ, ನೋಹನ ವಂಶದವರು ಅಧಿಕಗೊಂಡ ಹಾಗೆ, **ಅವರು ಪೂರ್ವದಿಕ್ಕಿಗೆ ಪ್ರಯಾಣ** ಮಾಡಿದರು. "ಪೂರ್ವ" (מִקֶּדֶם, *ಮಿಕ್ಕೆದಿಮ್)* ಎಂಬುದು ವಿವಿಧ ರೀತಿಗಳಲ್ಲಿ ಅನುವಾದಿಸಲ್ಪಟ್ಟಿದೆ: "ಪೂರ್ವದ ಕಡೆಗೆ" (NJB), "ಪೂರ್ವಕ್ಕೆ" (NLT), "ಪೂರ್ವ ದಿಕ್ಕಿನಿಂದ" (KJV; NRSV; ESV), ಮತ್ತು "ಪೂರ್ವ ದಿಕ್ಕಿನಲ್ಲಿ" (NAB; NEB; REB). NIVಯು ಈ ವಾಕ್ಯಭಾಗದಲ್ಲಿ ಪದದ ನಿಖರವಾದ ಅರ್ಥವನ್ನು ತಿಳಿಯುವದಕ್ಕಿರುವ ಸಮಸ್ಯೆಯನ್ನು ದೃಷ್ಟಾಂತಪಡಿಸುತ್ತದೆ: ಅದು ವಾಕ್ಯವನ್ನು "ಪೂರ್ವದ ಕಡೆಗೆ" ಎಂದು ಅನುವಾದಿಸುತ್ತದೆ, ಆದರೆ ಪರ್ಯಾಯ ಸಾಧ್ಯತೆಗಳಾಗಿ ಅಡಿಟಿಪ್ಪಣಿಗಳಲ್ಲಿ "ಪೂರ್ವ ದಿಕ್ಕಿನಿಂದ" ಮತ್ತು "ಪೂರ್ವ ದಿಕ್ಕಿನಲ್ಲಿ" ಎಂಬವುಗಳನ್ನು ನೀಡುತ್ತದೆ. "ಪೂರ್ವದ ಕಡೆಗೆ" ಅಥವಾ "ಪೂರ್ವ ದಿಕ್ಕಿಗೆ" ಎಂಬುದು ಆದಿಕಾಂಡ 13:11ರಲ್ಲಿನ ಇದೇ ಇಬ್ರಿಯ ಪದದ ಬಳಕೆಯೊಂದಿಗೆ ಉತ್ತಮವಾಗಿ ಹೊಂದಿಕೆಯಾಗುತ್ತದೆ, ಅಲ್ಲಿ ಲೋಟನು ಕಾನಾನಿನ ಮಧ್ಯದ ಪರ್ವತ ದೇಶವನ್ನು ಬಿಟ್ಟು "ಮೂಡಣ ಕಡೆಗೆ ಹೊರಟು" ಸೊದೋಮಿಗೆ ಪ್ರಯಾಣಿಸಲು ದೃಢನಿರ್ಧಾರ ಮಾಡಿಕೊಂಡನು.[4]

ಅಲ್ಲದೆ, ಇದು ಹೆಚ್ಚು ಸಂಭಾವ್ಯವಾದ ಬಣ್ಣನೆ ಆಗಿರುತ್ತದೆ ಯಾಕೆಂದರೆ **ಶಿನಾರ್ ದೇಶವು** ಬಾಬಿಲೋನಿಯಕ್ಕೆ (ಅಥವಾ ಬಾಬೆಲೋನಿಗೆ[5]) ಇರುವ ಮತ್ತೊಂದು ಹೆಸರಾಗಿದೆ. ಇದು ಅರಾರಾಟ್ ಪರ್ವತಕ್ಕೆ ದಕ್ಷಿಣದಲ್ಲಿತ್ತು, ಅಲ್ಲಿಯೇ ನಾವೆಯು ಹೋಗಿ ನಿಂತಿತ್ತು. ನೋಗನ ಕುಟಂಬವು ಆ ಪ್ರಾಂತ್ಯವನ್ನು ಇಳಿದು ಕೆಳಕ್ಕೆ ಮಹಾ ಮೆಸಪೋತಾಮ್ಯದ ಕಣಿವೆಯೊಳಗೆ ಪ್ರಯಾಣಿಸಿದರು. ಸ್ಪಷ್ಟವಾಗಿರುವಂತೆ ಅವರು ಪೂರ್ವದ ಕಡೆಗೆ ಬಾಬಿಲೋನಿನ ಪ್ರದೇಶಕ್ಕೆ ಪ್ರಯಾಣಿಸಿದರು ಮತ್ತು ಆ **ಬೈಲುಸೀಮೆಯಲ್ಲಿ ವಾಸಮಾಡಿಕೊಂಡರು**. ಕಾನಾನ್ ದೇಶದಲ್ಲಿ ಅಥವಾ ಸಮೀಪದಲ್ಲಿ ಎಂದು ಬರೆಯುವದರಲ್ಲಿ, ಲೇಖಕನ ದೃಷ್ಟಿಕೋನದಿಂದ ನೋಡುವದಾದರೆ, ನೋಹನ ಕುಟುಂಬವು ನೆಲೆಗೊಂಡ ಇಡೀ ಶಿನಾರ್ ಪ್ರಾಂತ್ಯವು ಪೂರ್ವದ ಕಡೆಯಲ್ಲಿತ್ತು.

**ವಚನ 3.** ಈ ವಚನವು ಕಟ್ಟಡ ನಿರ್ಮಾಣದ ಕುರಿತು ಯೋಜನೆ ಮಾಡುತ್ತಿರುವ ಜನರ ಬಗ್ಗೆ ಒಂದು ಚರ್ಚೆಯನ್ನು ಮುಂದಿಡುತ್ತದೆ. ಕಲ್ಲುಗಳ ಕೊರತೆಯಿದ್ದಂಥ ಒಂದು ದೇಶದಲ್ಲಿ,

ಅವರು ಒಗ್ಗಟ್ಟಾಗಿ ಕೂಡಿ ಬಂದು **ಇಟ್ಟಿಗೆಗಳನ್ನು** ಮಾಡಿ ಅವುಗಳನ್ನು **ಸುಟ್ಟು** ಗಟ್ಟಿಮಾಡೋಣ ಎಂದು ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿದರು. ಅವರು **ಸುಣ್ಣಕ್ಕೆ ಬದಲಾಗಿ ಕಲ್ಲರಗನ್ನೂ** [ಅಥವಾ ಡಾಂಬರು] **ಉಪಯೋಗಿಸಿದರು** ಯಾಕೆಂದರೆ ಅದು ಟೈಗ್ರೀಸ್-ಯೂಫ್ರೇಟಿಸ್ ಕಣಿವೆಯಲ್ಲಿ ಸುಲಭವಾಗಿ ಲಭ್ಯವಿತ್ತು. ಅವರು **ಕಲ್ಲುಗಳೋ** ಎಂಬಂತೆ ಗಟ್ಟಿಯಾದ "ಇಟ್ಟಿಗೆಗಳನ್ನು" ಬಳಸಿದರು ಎಂದು ವಾಕ್ಯವು ತಿಳಿಸುತ್ತದೆ. ಇವುಗಳು ಪ್ರಾಚೀನ ಮಧ್ಯಪ್ರಾಚ್ಯದ ಕಣಿವೆಗಳೊಳಗೆ ಮನೆಗಳ ಹಾಗೂ ಇತರ ಖಾಸಗಿ ಕಟ್ಟಡಗಳ ನಿರ್ಮಾಣದಲ್ಲಿ ಯಾವಾಗಲೂ ಬಳಕೆ ಮಾಡಲಾಗುತ್ತಿದ್ದ ಸೂರ್ಯನ ಬಿಸಿಲಿನಿಂದ ಬೇಯಿಸಲ್ಪಟ್ಟ ಸಾಮಾನ್ಯ ಇಟ್ಟಿಗೆಗಳಿಗಿಂತಲೂ ಹೆಚ್ಚು ಬಾಳಿಕೆ ಬರುವಂಥವುಗಳಾಗಿದ್ದವು.

**ವಚನ 4.** ಪುನಃ, ಜನರು ಕಟ್ಟಡದ ಯೋಜನೆಯಲ್ಲಿ ಭಾಗಿಯಾಗಿ **ಒಂದು ಪಟ್ಟಣವನ್ನೂ ಆಕಾಶವನ್ನು ಮುಟ್ಟುವ** [ಮುಟ್ಟಬಲ್ಲ] **ಗೋಪುರವನ್ನೂ** ಕಟ್ಟೋಣ ಬನ್ನಿರಿ ಎಂದು ಒಬ್ಬರನ್ನೊನ್ನರು ಪ್ರೋತ್ಸಾಹಿಸಿದರು. ಈ ಕಟ್ಟಡದ ಯೋಜನೆಯು ದಾಳಿ ಮಾಡುವ ಸೈನ್ಯಗಳಿಂದ ರಕ್ಷಣೆಯನ್ನು ಒದಗಿಸಬೇಕೆಂಬ ಉದ್ದೇಶದಿಂದ ಕಟ್ಟಿರುವ ಒಂದು ಬೃಹತ್, ಕೋಟೆಯುಳ್ಳಂಥ ನಗರ-ಗೋಪುರ ಎಂದು ಅರ್ಥನಿರೂಪಣೆ ಮಾಡಲ್ಪಟ್ಟಿದೆ. "ಗೋಪುರ" ಎಂಬುದಕ್ಕಿರುವ ಇಬ್ರಿಯ ಪದವು (מִגְדָּל, *ಮಿಗ್ದಾಲ್)* ಅನಂತರದಲ್ಲಿ ಈ ವಿಧದಲ್ಲಿ ಬಳಸಲ್ಪಟ್ಟಿರುತ್ತದೆ (ನ್ಯಾಯಸ್ಥಾಪಕ 8:9, 17; 9:46-52; ಕೀರ್ತನೆ 48:12; 61:3; ಯೆಹೆಜ್ಕೇಲ 26:4, 9). ನಮಗೆ ತಿಳಿದಿರುವ ಪ್ರಕಾರವಾಗಿ, ನೋಹನ ವಂಶದವರೆಲ್ಲರೂ ಈ ಕಟ್ಟಡದ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದರು. ಪ್ರಳಯದ ನಂತರದಲ್ಲಿ ಬೇರೆ ಇನ್ನಾವ ಜನರು ಇರಲಿಲ್ಲವಾದ್ದರಿಂದ, ನೋಹನ ವಿಸ್ತರಿತ ಕುಟುಂಬವು ಬಹುಶಃ ಒಂದು ಭದ್ರತೆಯ ಗೋಪುರವನ್ನು ಕಟ್ಟುವದಕ್ಕೆ ಪ್ರಯತ್ನಿಸುತ್ತಿರಲಿಲ್ಲ ಎಂದು ತೋರುತ್ತದೆ.

ಬಾಬೆಲ್ ಗೋಪುರವು ಬಾಬಲೋನಿನ ಹಂತಗೋಪುರ ದೇವಾಲಯವಾಗಿತ್ತು, ಒಂದರ ಮೇಲೊಂದರಂತೆ ಕಟ್ಟಿದ ಪಿರಾಮಿಡ್ ಶೈಲಿಯ ಕಟ್ಟಡವಾಗಿತ್ತು. ಪ್ರಾಚೀನ ಐಗುಪ್ತದಲ್ಲಿ ಎಲ್ಲಾ ಪಿರಾಮಿಡ್‌ಗಳು ಸಮಾಧಿಗಳಾಗಿ ಮಾರ್ಪಟ್ಟ ರೀತಿಯಲ್ಲಿ, ಇದೊಂದು ಗವಿ ಸಮಾಧಿಯಾಗಿರಲಿಲ್ಲ. ಸ್ಪಷ್ಟವಾಗಿರುವಂತೆ ಅದೊಂದು ದೇವಾಲಯ ಆಗಿತ್ತು. ಪ್ರಾಚೀನ ಮೆಸಪೋತಾಮ್ಯದಲ್ಲಿನ ಜನರು ಹಂತಗೋಪುರ ದೇವಾಲಯವನ್ನು ಆಕಾಶ ಮತ್ತು ಭೂಮಿಯ ನಡುವಿನ ಸಂಪರ್ಕದ ಜೋಡನೆ ಎಂದು ಭಾವಿಸಿದ್ದರು. ಹೊಸ ವರ್ಷದ ದಿನದಂದು, ದೇವಾಲಯಕ್ಕೆ ಸಾಗುವ ಮೆಟ್ಟಿಲುಗಳನ್ನು ಹತ್ತಿ ತುದಿಗೆ ಹೋಗಿ ನಗರ-ರಾಜ್ಯದ ಅರಸನಾದ ಮುಖ್ಯ ದೇವರ ಕೈಯನ್ನು ತಾಗಿಸಿ ಬಂದರೆ ಮುಂಬರುವ ವರ್ಷದಲ್ಲಿ ಆತನ ರಾಜ್ಯಕ್ಕೆ ಸಮಾಧಾನ, ಸಮೃದ್ಧಿ, ಆಶೀರ್ವಾದಗಳನ್ನು ತರುವುದೆಂದು ಭಾವಿಸಲಾಗಿತ್ತು.

ಬಾಬಿಲೋನಿನಲ್ಲಿದ್ದ ಹಂತಗೋಪುರ ದೇವಾಲಯವು ನಿಜಕ್ಕೂ ಬೃಹತ್ ಗಾತ್ರದಲ್ಲಿತ್ತೆಂಬುದನ್ನು ಆರಂಭದ ಚರಿತ್ರೆಗಳು ದೃಢಪಡಿಸುತ್ತವೆ. ಕ್ರಿ.ಪೂ. ಐದನೆಯ ಶತಮಾನದ ಇತಿಹಾಸಕಾರನಾದ Herodotusನು, ಆ ಗೋಪುರವು ಎಂಟು ಹಂತಗಳನ್ನು ಹೊಂದಿತ್ತೆಂದು ಹೇಳಿದನು.[6] ಅದರ ಎತ್ತರವು ಸುಮಾರು ಇನ್ನೂರರಿಂದ ಮುನ್ನೂರು ಅಡಿಗಳಷ್ಟು ಎಂಬುದಾಗಿ ಅಂದಾಜು ಮಾಡಲಾಗಿದೆ. ಅಂಥ ಊಹೆಗಳು ನಮಗೆ ಉತ್ಪ್ರೇಕ್ಷಿಸಿ ಹೇಳಿದವುಗಳೆಂದು ಅನ್ನಿಸಬಹುದು; ಆದರೆ ಅನಂತರದಲ್ಲಿನ ದೇವಾಲಯ-ಗೋಪುರಗಳು ಅಷ್ಟೊಂದು ಬೃಹತ್ ಎತ್ತರವನ್ನು ತಲುಪಿದಾಗ್ಯೂ, ಮೂಲ ಬಾಬೆಲ್ ಗೋಪುರವು ಖಂಡಿತವಾಗಿಯೂ ಹೆಚ್ಚು ಚಿಕ್ಕದಾದ ಮೂಲರೂಪವಾಗಿರಬಹುದಾಗಿದೆ. ವಾಸ್ತವಿಕದಲ್ಲಿ, ಬೈಬಲಿನ ಚರಿತ್ರೆಯೊಳಗೆ ಗಾತ್ರವು ಮುಖ್ಯವಾಗಿರಲಿಲ್ಲ; ಕಟ್ಟಡದ ಉದ್ದೇಶವೇ ವಾಕ್ಯದ

ಲೇಖಕನಿಗೆ ಮಹತ್ವಪೂರ್ಣವಾಗಿತ್ತು. ಜನರು ದೇವರನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳಬೇಕೆಂದಷ್ಟೇ ಬಯಸಿರಲಿಲ್ಲ, ಆದರೆ ಅವರು ತಮಗೋಸ್ಕರ **ದೊಡ್ಡ ಹೆಸರನ್ನು ಪಡೆಯೋಣ** ಎಂದು ಬಯಸಿದ್ದರು, ಹೀಗೆ ಮಾಡಿದರೆ ತಾವು **ಭೂಮಿಯ ಮೇಲೆಲ್ಲಾ ಚದರುವದಕ್ಕೆ ಆಸ್ಪದವಾಗುವದಿಲ್ಲ** ಅಂದುಕೊಂಡಿದ್ದರು.

ಮತ್ತೊಂದಾವರ್ತಿ, ಈ ಬೃಹತ್ ಕಟ್ಟಡ ಕೆಲಸವನ್ನು ಪೂರ್ತಿಗೊಳಿಸುವ ಮೂಲಕ ತಮಗೋಸ್ಕರ "ದೊಡ್ಡ ಹೆಸರನ್ನು" (ಅಥವಾ ಪ್ರಸಿದ್ಧಿ[7]) ಸಂಪಾದಿಸಿಕೊಳ್ಳುವದಕ್ಕೆ ಜನರು ಮಾಡಿದ ಪ್ರಯತ್ನದಲ್ಲಿ ಗರ್ವವೇ ಅವರ ಉತ್ತೇಜನವಾಗಿತ್ತು. ತಾವು ಆಕಾಶ ಮತ್ತು ಭೂಮಿಯ ನಡುವಿನ ಅಂತರಕ್ಕೆ ಸೇತುವೆಯನ್ನು ಕಟ್ಟಬಲ್ಲೆವು ಮತ್ತು ತಮ್ಮ ಕ್ರಿಯೆಗಳ ಮೂಲಕ ದೇವರನ್ನು ಪ್ರಸನ್ನಗೊಳಿಸುವ ಮೂಲಕ ತಮ್ಮ ರಕ್ಷಣೆಯನ್ನು ಹಾಗೂ ಆಶೀರ್ವಾದಗಳನ್ನು ಖಾತ್ರಿಪಡಿಸಿಕೊಳ್ಳಬಹುದೆಂದು ನಂಬಿದ್ದರು.

ಆ ಪ್ರಾಚೀನ ಸಮುದಾಯದೊಳಗೆ ಒಡಕುಗಳ ಬೀಜಗಳು ಮುಂಚೆಯೇ ಇದ್ದವು; ಬಹುಶಃ ತಮ್ಮ ಸಾಧನೆಯು ಒಂದೇ ಜನಾಂಗವಾಗಿ ಎಲ್ಲರನ್ನೂ ಒಗ್ಗೂಡಿಸಿ ಹಿಡಿದಿಟ್ಟುಕೊಳ್ಳುವಂತೆ ಸಹಾಯ ಮಾಡುವದೆಂದು ಅವರ ಆಲೋಚನೆಯಾಗಿದ್ದಿರಬಹುದು. ದೇವರು ತನ್ನ ಜನರೊಳಗೆ ನಿಜವಾದ ಐಕ್ಯತೆಯು ಇರಬೇಕೆಂದು ಯಾವಾಗಲೂ ಬಯಸಿದನೆಂಬುದು ಸತ್ಯವೇ ಆಗಿದೆಯಾದರೂ, ನೋಹನ ಸಂತತಿಯವರು ಇಂತಹ ಕಟ್ಟಡದ ಯೋಜನೆಯಲ್ಲಿ ಒಂದಾಗಿ ಮತ್ತು ಸಂಘಟಿತರಾಗಿ ಇರಬೇಕೆಂಬುದನ್ನು ಆತನು ಖಂಡಿತವಾಗಿಯೂ ಬಯಸಲಿಲ್ಲ. ಆಕಾಶ ಮತ್ತು ಭೂಮಿಗಳ ಸಾರ್ವಭೌಮ ಒಡೆಯನಾಗಿ, ಮನುಷ್ಯನ ಹೃದಯಗಳು ಕೆಟ್ಟದ್ದನ್ನು ಮಾಡುವದಕ್ಕೆ ಒಲವು ಹೊಂದಿರುತ್ತವೆಂಬುದು ಆತನಿಗೆ ಗೊತ್ತಿತ್ತು (6:5). ಈ ಜನರು ಆತನಿಗೆ ವಿರುದ್ಧವಾಗಿ ಬಂಡಾಯವೆದ್ದಿದ್ದರು, ಯಾಕೆಂದರೆ ಅವರು ಒಂದೇ ನಗರದಲ್ಲಿ ನೆಲೆಗೊಳ್ಳುವ ಮೂಲಕವಾಗಿ ಪ್ರಳಯದ ನಂತರದಲ್ಲಿ ಕೊಡಲ್ಪಟ್ಟಿದ್ದ ದೈವಿಕ ಆಜ್ಞೆಯ ಕಡೆಯ ಭಾಗಕ್ಕೆ - "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" (9:1) - ವಿರುದ್ಧವಾದ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು.

## ಮನುಷ್ಯರ ಗರ್ವಕ್ಕೆ ದೇವರು ದಂಡನೆಯನ್ನುಂಟು ಮಾಡಿದ್ದು (11:5-9)

**5ನರಪುತ್ರರು ಕಟ್ಟುತ್ತಿದ್ದ ಆ ಪಟ್ಟಣವನ್ನೂ ಗೋಪುರವನ್ನೂ ನೋಡುವದಕ್ಕೆ ಯೆಹೋವನು ಇಳಿದು ಬಂದನು. 6ನೋಡಿದ ಮೇಲೆ ಆತನು - ಇವರು ಒಂದೇ ಜನಾಂಗ; ಇವರೆಲ್ಲರಿಗೂ ಒಂದೇ ಭಾಷೆ. ಪ್ರಾರಂಭದಲ್ಲೇ ಇಷ್ಟು ದೊಡ್ಡ ಕೆಲಸ ಮಾಡುವವರಾಗಿರಲು ಮುಂದೆ ಏನು ಆಲೋಚಿಸಿದರೂ ಇವರಿಗೆ ಅಸಾಧ್ಯವಲ್ಲ. 7ನಾವು ಇಳಿದು ಇವರಲ್ಲಿ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಇವರ ಭಾಷೆಯನ್ನು ತಾರುಮಾರುಮಾಡೋಣ ಬನ್ನಿ ಅಂದನು. 8ಹಾಗೆಯೇ ಮಾಡಿ ಯೆಹೋವನು ಅವರನ್ನು ಅಲ್ಲಿಂದ ಭೂಲೋಕದಲ್ಲೆಲ್ಲಾ ಚದರಿಸಿದನು. ಅವರು ಆ ಪಟ್ಟಣ ಕಟ್ಟುವದನ್ನು ನಿಲ್ಲಿಸಿಬಿಟ್ಟರು. 9ಸಮಸ್ತಲೋಕದ ಭಾಷೆಯನ್ನು ಯೆಹೋವನು ಅಲ್ಲಿ ತಾರುಮಾರುಮಾಡಿ ಅವರನ್ನು ಅಲ್ಲಿಂದ ಭೂಲೋಕದಲ್ಲೆಲ್ಲಾ ಚದರಿಸಿದ್ದರಿಂದ ಆ ಪಟ್ಟಣಕ್ಕೆ ಬಾಬೆಲ್ ಎಂಬ ಹೆಸರಾಯಿತು.**

**ವಚನ 5.** ಈ ವಚನದಿಂದ ಕಥೆಯಲ್ಲಿ ಒಂದು ತಿರುವು ಆರಂಭವಾಗುತ್ತದೆ. ದೃಶ್ಯವು ಭೂಮಿಯಿಂದ ಆಕಾಶಕ್ಕೆ ಸ್ಥಳಾಂತರಗೊಳ್ಳುತ್ತದೆ, ಮತ್ತು ಭಾಷೆಯು ವಿಪರ್ಯಾಸವುಳ್ಳದ್ದು ಮತ್ತು ಅಕ್ಷರಶಃವಲ್ಲದ್ದು ಆಗಿದೆ. ಚರಿತ್ರೆಯು **ನರಪುತ್ರರು ಕಟ್ಟುತ್ತಿದ್ದ ಆ ಪಟ್ಟಣವನ್ನೂ**

**ಗೋಪುರವನ್ನೂ ನೋಡುವದಕ್ಕೆ ಯೆಹೋವನು ಇಳಿದು ಬಂದನು** ಎಂಬುದಾಗಿ ಬಣ್ಣಿಸುತ್ತದೆ. ಈ ಹೇಳಿಕೆಯು ಸ್ಪಷ್ಟವಾಗಿರುವಂತೆ ಅಕ್ಷರಶಃವಾಗಿ ಭಾವಿಸಿಕೊಳ್ಳಬಾರದು ಯಾಕೆಂದರೆ ದೇವರು ಕಾಲ ಅಥವಾ ಸ್ಥಳಕ್ಕೆ ಸೀಮಿತವಾದವನಲ್ಲ (ಕೀರ್ತನೆ 139:7-12). ಜನರು ಏನು ಮಾಡುತ್ತಿರುವದನ್ನ ನಿಖರವಾಗಿ ನೋಡುವಾತನು ಮತ್ತು ಬಲ್ಲವನು ಆಗಿರುತ್ತಾನೆ (ಜ್ಞಾನೋಕ್ತಿ 15:3; ಯೆರೆಮೀಯ 23:24; ಇಬ್ರಿಯ 4:13). ಬಾಬಿಲೋನಿನ ಜನರು ಆಕಾಶವನ್ನು ಮುಟ್ಟುವಷ್ಟು ಎತ್ತರದ ಗೋಪುರವೊಂದನ್ನು ಕಟ್ಟಬೇಕೆಂಬ ಉದ್ದೇಶ ಹೊಂದಿದ್ದರು; ಹೇಗೂ, ಸಾಂಕೇತಿಕವಾಗಿ ಮಾತಾಡುವದಾದರೆ, ಫಲಿತವು ಎಷ್ಟೊಂದು ಚಿಕ್ಕದಾಗಿತ್ತೆಂದರೆ ಅದನ್ನು "ನೋಡುವದಕ್ಕೆ" ಆತನು ಭೂಮಿಗೆ ಸಮೀಪವಾಗಿ "ಇಳಿದು ಬಂದನು."

**ವಚನ 6.** ಆತನು ತನ್ನ ಹೃದಯದಲ್ಲಿರುವದನ್ನು ಮಾತಾಡುವವನಾಗಿ, **ಇವರು ಒಂದೇ ಜನಾಂಗ; ಇವರೆಲ್ಲರಿಗೂ ಒಂದೇ ಭಾಷೆ** ಎಂದು ಹೇಳಿದನು. **ಪ್ರಾರಂಭದಲ್ಲೇ ಇಷ್ಟು ದೊಡ್ಡ ಕೆಲಸ ಮಾಡುವವರಾಗಿ**ದ್ದನ್ನು ಆತನು ಕಂಡನು. ಇಲ್ಲಿ ಸೂಚ್ಯಾರ್ಥವು ಏನೆಂದರೆ, ಈ ಗುರಿಯನ್ನು ಸಾಧಿಸುವಂತೆ ದೇವರು ಅವರಿಗೆ ಅವಕಾಶವನ್ನು ಕೊಡುವದಾದಲ್ಲಿ, **ಮುಂದೆ ಏನು ಆಲೋಚಿಸಿದರೂ ಇವರಿಗೆ ಅಸಾಧ್ಯವಲ್ಲ**. ಇದರರ್ಥವು ಮನುಷ್ಯನ ಶಕ್ತಿ ಅಥವಾ ಜ್ಞಾನವನ್ನು ಕಂಡು ದೇವರು ಭಯಗೊಂಡಿದ್ದನು ಎಂದಲ್ಲ, ಆದರೆ ಆತನ ಕಳಕಳಿಯು - ವರ್ತಮಾನಕ್ಕಾಗಿ ಮಾತ್ರವೇ ಅಲ್ಲ, ಆದರೆ ಅವರ ಭವಿಷ್ಯಕ್ಕಾಗಿ ಸಹ - ಪ್ರೀತಿಯುಳ್ಳ ಪೋಷಕರು ತಮ್ಮ ಮಕ್ಕಳ ವಿಷಯದಲ್ಲಿ ಹೊಂದಿರುವ ಕಳಕಳಿಯಂತೆಯೇ ಆಗಿತ್ತು. ಅವರ ದುರಹಂಕಾರದ ದಾರಿಯಲ್ಲಿ ನಡೆಯುವಂತೆ ಅವರಿಗೆ ಅವಕಾಶ ಕೊಡುವದಾದರೆ, ಅವರು ತಮ್ಮ ಸ್ವನಾಶನಕ್ಕೆ ನಡಿಸುವಂತಹ ಪ್ರಳಯಪೂರ್ವದ ಭ್ರಷ್ಟತನಕ್ಕೆ ಪುನಃ ತಿರುಗಿಕೊಳ್ಳುವರು ಎಂಬುದು ಆತನಿಗೆ ಗೊತ್ತಿತ್ತು. ಇಲ್ಲಿನ ಮಾತುಗಳ ಬಳಕೆಯು ಏದೆನ್ ತೋಟದಲ್ಲಿ ಯೆಹೋವನು ನುಡಿದ ಮಾತುಗಳಂತೆಯೇ ಇರುತ್ತದೆ, ಆಗ ಆತನು ಹೇಳಿದ್ದೇನೆಂದರೆ, "ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ. ಇದರಿಂದ ಇವನು ಕೈಚಾಚಿ ಜೀವವೃಕ್ಷದ ಫಲವನ್ನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಾರದು" (3:22). ಒಂದು ಬಿದ್ದು ಹೋಗಿರುವ ಲೋಕದಲ್ಲಿ ಪಾಪಿಗಳಾಗಿ ಶಾಶ್ವತವಾಗಿ ಬದುಕುವದೆಂದರೆ ಭೂಮಿಯ ಮೇಲೆ ನರಕವನ್ನು ಅನುಭವಿಸುವ ರೀತಿಯಾಗಿರುತ್ತದೆ. ದೇವರು ತನ್ನ ಕೃಪೆಯ ಮೂಲಕವಾಗಿ, ಅಂತಹ ಒಂದು ವಿಧಿಯಿಂದ ಮಾನವರನ್ನು ತಪ್ಪಿಸಿ ಕಾಪಾಡಬೇಕೆಂದು ದೃಢಸಂಕಲ್ಪ ಮಾಡಿಕೊಂಡನು.

**ವಚನಗಳು 7, 8. ನಾವು ಇಳಿದು ಇವರಲ್ಲಿ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಇವರ ಭಾಷೆಯನ್ನು ತಾರುಮಾರುಮಾಡೋಣ ಬನ್ನಿ** ಎಂಬ ಯೆಹೋವನ ನುಡಿಗಳು, ಈ ಮುಂಚೆ ಕೆಲವು ಜನರು ಕಿವಿಮಾತಿಗೆ ತದ್ವಿರುದ್ಧವಾಗಿರುತ್ತದೆ: "ಒಂದು ಪಟ್ಟಣವನ್ನೂ ಆಕಾಶವನ್ನು ಮುಟ್ಟುವ ಗೋಪುರವನ್ನೂ ಕಟ್ಟಿ ದೊಡ್ಡ ಹೆಸರನ್ನು ಪಡೆಯೋಣ" (11:4). ಪುನಃ, ಯೆಹೋವನ ಹೇಳಿಕೆಯು ಆತನು ಏದೆನ್ ತೋಟದಲ್ಲಿ ಮಾಡಿದ ಅವಲೋಕನದಂತೆಯೇ ಇರುತ್ತದೆ: "ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" (3:22). ಆ ದುರಹಂಕಾರದ ಅಕಾಂಕ್ಷೆಯನ್ನು ಭಂಗಪಡಿಸುವದಕ್ಕಾಗಿ, ದೇವರು ಆದಾಮ ಮತ್ತು ಹವ್ವಳರನ್ನು ತೋಟದಿಂದ ಹೊರಗೆ ಓಡಿಸಿ "ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ" ಅಲ್ಲಿ ಆತನು "ಕೆರೂಬಿಯರನ್ನೂ ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನೂ ಇರಿಸಿದನು" (3:24). 3:22ರಲ್ಲಿ "ನಾವು" ಎಂಬ ಬಹುವಚನದ ಸರ್ವನಾಮವು ದೇವರನ್ನು ಮತ್ತು 3:24ರಲ್ಲಿನ "ಕೆರೂಬಿಯರನ್ನು" ಸೂಚಿಸುತ್ತದೆ; ಯೆಹೋವನು ತನ್ನ

ದೇವದೂತರ ಸಭೆಯನ್ನು ಉದ್ದೇಶಿಸಿ ಮಾತಾಡಿದನೆಂಬುದು ಸ್ಪಷ್ಟವಾಗುತ್ತದೆ, ಅದರೊಳಗೆ ಕೆರೂಬಿಯರು ಸೇರಿದ್ದರು (1:26; 3:22ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು 11:7ರಲ್ಲಿ ಸಹ ಈ ದೇವದೂತರ ಸಭೆಯವರನ್ನು ಸಂಬೋಧಿಸಿ ಮಾತಾಡುತ್ತಿರಬಹುದಾಗಿದೆ, ಬಾಬೆಲ್ ಗೋಪುರವನ್ನು ಕಟ್ಟುವವರ ಮೇಲೆ ಬರಲಿರುವ ನ್ಯಾಯತೀರ್ಪನ್ನು ಗಮನಿಸುವಂತೆ ಮತ್ತು ಭಾಗಿಯಾಗುವಂತೆ ಅವರನ್ನು ಪ್ರೋತ್ಸಾಹಿಸುತ್ತಿದ್ದಾನೆ. ಅವರ ಭಾಷೆಯನ್ನು ಗಲಿಬಿಲಿಗೊಳಿಸುವ ಮೂಲಕ, ಯೆಹೋವನು ಒಬ್ಬರ ಮಾತನ್ನು ಒಬ್ಬರು ಅರ್ಥಮಾಡಿಕೊಳ್ಳುವುದು ಅವರಿಗೆ ಅಸಾಧ್ಯವಾಗುವಂತೆ ಮಾಡಿದನು. ಆದದರಿಂದ, ಅವರು ಕಟ್ಟಡದ ಕೆಲಸವನ್ನು ಕೈಬಿಟ್ಟರು, **ಅವರು ಭೂಲೋಕದಲ್ಲೆಲ್ಲಾ ಚದುರಿ**ಸಲ್ಪಟ್ಟರು, ಮತ್ತು **ಆ ಪಟ್ಟಣ ಕಟ್ಟುವದನ್ನು ನಿಲ್ಲಿಸಿಬಿಟ್ಟರು**.

**ವಚನ 9.** ಲೇಖಕನು ವಾಸ್ತವಿಕವಾಗಿ ಒಂದು ವಿಧವಾದ ಮೌಖಿಕ ವಿಪರ್ಯಾಸವಾಗಿದ್ದಂಥ ಶಬ್ದಾಡಂಬರವನ್ನು ಬಳಸುವ ಮೂಲಕ ಒಂದು ದೈವಶಾಸ್ತ್ರೀಕ ಮುಕ್ತಾಯವನ್ನು ತಿಳಿಸುತ್ತಾನೆ: **ಬಾಬೆಲ್** (בָּבֶל, *ಬಾಬೆಲ್*) ಎಂಬ ಪದದ ಅರ್ಥವು ಬಾಬಿಲೋನಿನವರಿಗಾಗಿ "ದೇವರ ದ್ವಾರ"[8] ಎಂದಾಗಿದೆ; ಹೇಗೂ, ಬೈಬಲಿನ ಲೇಖಕನು ಒಂದು ಪ್ರಸಿದ್ಧವಾದ ವ್ಯುತ್ಪತ್ತಿಶಾಸ್ತ್ರವನ್ನು ಬಳಸಿದನು ಮತ್ತು "ಬಾಬೆಲ್" ಎಂಬುದನ್ನು ಅದೇ ರೀತಿಯ ಉಚ್ಚಾರವಿರುವಂಥ ಇಬ್ರಿಯ ಪದವಾದ בָּלַל *(ಬಲಾಲ್)* ಎಂಬದರೊಂದಿಗೆ ಜೋಡಿಸುತ್ತಾನೆ, ಈ ಪದದ ಅರ್ಥವು **ತಾರುಮಾರು**.[9] ಗೋಪುರವನ್ನು ಕಟ್ಟುವವರ ಉದ್ದೇಶವು ಅದು ಅವರ ಯೋಜನೆಯನ್ನು ನೆರವೇರಿಸುವದಕ್ಕಾಗಿ ದ್ವಾರವಾಗಬೇಕು ಎಂದಾಗಿತ್ತು ಮತ್ತು ಈ ಯೋಜನೆಯನ್ನು ದೇವರು ಭಂಗಪಡಿಸಿದನು ಎಂಬುದನ್ನು ತಿಳಿಯಪಡಿಸುವ ಮೂಲಕ, ಲೇಖಕನು ವಿಪರ್ಯಾಸವಾಗಿ ಇದೊಂದು ಗಲಿಬಿಲಿಗೆ ದ್ವಾರವಾಗಿ ಮಾರ್ಪಟ್ಟಿತು ಎಂಬುದನ್ನು ಸೂಚಿಸುತ್ತಾನೆ. ಎಲ್ಲಾ ಮಾನವರ **ಭಾಷೆ**ಯು ಈ ಅನ್ಯಧರ್ಮಿಯ ಯೋಜನೆಯಿಂದಾಗಿ ಗಲಿಬಲಿಯಾಗಿ ಮಾರ್ಪಟ್ಟಿತು. ಪ್ರಾಚೀನ ಬಾಬೆಲ್ (ಬಾಬಿಲೋನ) ಜನರು ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳಲು ವಿಫಲರಾದರು, ಮತ್ತು **ಯೆಹೋವನು … ಅವರನ್ನು ಅಲ್ಲಿಂದ ಭೂಲೋಕದಲ್ಲೆಲ್ಲಾ ಚದರಿಸಿದ**ನು.

## ಶೇಮನ ವಂಶಾವಳಿಯ ಕುಟುಂಬ (11:10-26)

**10ಶೇಮನ ವಂಶದವರ ಚರಿತ್ರೆಯು. ಜಲಪ್ರಳಯವು ಕಳೆದು ಎರಡು ವರುಷಗಳಾದ**
**ಮೇಲೆ ಶೇಮನು ನೂರು ವರುಷದವನಾಗಿ ಅರ್ಪಕ್ಷದನನ್ನು ಪಡೆದನು. 11ಅವನು ಅರ್ಪಕ್ಷದನನ್ನು**
**ಪಡೆದ ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ಐನೂರು ವರುಷ ಬದುಕಿದನು. 12ಅರ್ಪಕ್ಷದನು**
**ಮೂವತ್ತೈದು ವರುಷದವನಾಗಿ ಶೆಲಹನನ್ನು ಪಡೆದನು. 13ಅವನು ಶೆಲಹನನ್ನು ಪಡೆದ ಮೇಲೆ**
**ಗಂಡು ಹೆಣ್ಣು ಮಕ್ಕಳನ್ನು ಪಡೆದು ನಾನೂರ ಮೂರು ವರುಷ ಬದುಕಿದನು. 14ಶೆಲಹನು**
**ಮೂವತ್ತು ವರುಷದವನಾಗಿ ಎಬರನನ್ನು ಪಡೆದನು. 15ಅವನು ಎಬರನನ್ನು ಪಡೆದ ಮೇಲೆ**
**ಗಂಡು ಹೆಣ್ಣು ಮಕ್ಕಳನ್ನು ಪಡೆದು ನಾನೂರ ಮೂರು ವರುಷ ಬದುಕಿದನು. 16ಎಬರನು**
**ಮೂವತ್ತು ನಾಲ್ಕು ವರುಷದವನಾಗಿ ಪೆಲೆಗನನ್ನು ಪಡೆದನು. 17ಅವನು ಪೆಲೆಗನನ್ನು ಪಡೆದ**
**ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ನಾನೂರ ಮೂವತ್ತು ವರುಷ ಬದುಕಿದನು. 18ಪೆಲೆಗನು**
**ಮೂವತ್ತು ವರುಷದವನಾಗಿ ರೆಗೂವನನ್ನು ಪಡೆದನು. 19ಅವನು ರೆಗೂವನನ್ನು ಪಡೆದ ಮೇಲೆ**
**ಗಂಡು ಹೆಣ್ಣು ಮಕ್ಕಳನ್ನು ಪಡೆದು ಇನ್ನೂರ ಒಂಭತ್ತು ವರುಷ ಬದುಕಿದನು. 20ರೆಗೂವನು**
**ಮೂವತ್ತೆರಡು ವರುಷದವನಾಗಿ ಸೆರೂಗನನ್ನು ಪಡೆದನು. 21ಅವನು ಸೆರೂಗನನ್ನು ಪಡೆದ**

ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ಇನ್ನೂರ ಏಳು ವರುಷ ಬದುಕಿದನು. [22]ಸೆರೂಗನು ಮೂವತ್ತು ವರುಷದವನಾಗಿ ನಾಹೋರನನ್ನು ಪಡೆದನು. [23]ಅವನು ನಾಹೋರನನ್ನು ಪಡೆದ ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ಇನ್ನೂರು ವರುಷ ಬದುಕಿದನು. [24]ನಾಹೋರನು ಇಪ್ಪತ್ತೊಂಭತ್ತು ವರುಷದವನಾಗಿ ತೆರಹನನ್ನು ಪಡೆದನು. [25]ಅವನು ತೆರಹನನ್ನು ಪಡೆದ ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ನೂರ ಹತ್ತೊಂಭತ್ತು ವರುಷ ಬದುಕಿದನು. [26]ತೆರಹನು ಎಪ್ಪತ್ತು ವರುಷದವನಾಗಿ ಅಬ್ರಾಮ, ನಾಹೋರ, ಹಾರಾನ ಎಂಬ ಮಕ್ಕಳನ್ನು ಪಡೆದನು.**

ಬಾಬೆಲ್ ಗೋಪುರದ ಚರಿತ್ರೆಯು ಆದಿಕಾಂಡ ಪುಸ್ತಕದ ಮೊದಲ ಭಾಗದ ಮುಕ್ತಾಯವಾಗಿರುವದಿಲ್ಲ. ಅದು ಹಾಗೆ ಇರುವದಾದಲ್ಲಿ, ಮೊದಲ ಭಾಗವು ಮನುಷ್ಯನ ಪಾಪ, ಗರ್ವ, ಮತ್ತು ವಿಫಲತೆಯ ಮತ್ತೊಂದು ಕಥನದೊಂದಿಗೆ ಒಂದು ಕಹಿ ಟಿಪ್ಪಣಿಯಿಂದ ಅಂತ್ಯಗೊಳ್ಳಬಹುದಿತ್ತು. ಬದಲಾಗಿ, ಪುಸ್ತಕದಲ್ಲಿ ಮುಂಚಿನ ಅಧ್ಯಾಯಗಳಲ್ಲಿರುವಂತೆಯೇ, ನ್ಯಾಯತೀರ್ಪಿನ ನಡುವೆಯೂ ದೇವರ ಕೃಪೆಯು ಇತ್ತು. ನೋಹನ ಸಂತತಿಯವರನ್ನು ಚದುರಿಸಿ ಅವರ ಭಾಷೆಗಳನ್ನು ಗಲಿಬಿಲಿಗೊಳಿಸಿದ ಬಳಿಕ, ಶೇಮನ ಮತ್ತೊಂದು ವಂಶಾವಳಿಯ ದಾಖಲೆಯನ್ನು ಕೊಡಲಾಗಿದ್ದು ಅದು ನಿರೀಕ್ಷೆಯನ್ನು ಒದಗಿಸುತ್ತದೆ. 10ನೇ ಅಧ್ಯಾಯದಲ್ಲಿನ ಪಟ್ಟಿಯು ಎಬರ, ಪೆಲೆಗ, ಮತ್ತು ಯೊಕ್ತಾನರ ಇಬ್ಬರು ಪುತ್ರರ ಹೆಸರುಗಳನ್ನು ತಿಳಿಸಿತು; ಆದರೆ ಕಡೆಯವನ ಸಂತಾನದವರನ್ನು ಮಾತ್ರವೇ ಪಟ್ಟಿ ಮಾಡಲಾಗಿತ್ತು (10:25-31). ಅದಕ್ಕೆ ತದ್ವಿರುದ್ಧವಾಗಿ, 11ನೇ ಅಧ್ಯಾಯದಲ್ಲಿನ ವಂಶಾವಳಿಯ ಚರಿತ್ರೆಯು ಎಬರನಿಗೆ ಹಲವಾರು ಪುತ್ರರು ಮತ್ತು ಪುತ್ರಿಯರು ಹುಟ್ಟಿದರೆಂದು ತಿಳಿಸುತ್ತದೆ (11:17) ಆದರೆ ಪೆಲೆಗ ಮತ್ತು ಅಬ್ರಹಾಮನ ತನಕದ ಆತನ ಸಂತತಿಯವರನ್ನು ಮಾತ್ರವೇ ಪ್ರಸ್ತಾಪಿಸುತ್ತದೆ (11:16-26). ಇದು ಮಾನವರನ್ನು ಆಶೀರ್ವದಿಸಬೇಕೆಂಬ ದೇವರ ಯೋಜನೆಯು ಭಂಗಪಡಿಸಲ್ಪಡುವದಿಲ್ಲ ಎಂಬ ಭರವಸವನ್ನು ಒದಗಿಸುತ್ತದೆ; ಅಬ್ರಹಾಮನು ಅಂತಿಮವಾಗಿ "ಭೂಲೋಕದ ಎಲ್ಲಾ ಕುಲದವರಿಗೆ" ಆಶೀರ್ವಾದಗಳು ಹರಿದು ಬರಲಿದ್ದ ಸಾಧನವಾಗುವವನಿದ್ದನು (12:3).

11:10-32ರಲ್ಲಿ ಶೇಮನ ವಂಶಾವಳಿಯ ಚರಿತ್ರೆಯು (ತೇರಹನ ವಂಶವೂ ಸೇರಿದಂತೆ) 5:3-32ರಲ್ಲಿರುವ ಸೇತನ ವಂಶಾವಳಿಯನ್ನು ಪೂರ್ತಿಗೊಳಿಸುತ್ತದೆ, ದೇವರು ಇತಿಹಾಸದಲ್ಲಿ ಮಾನವರಿಗಾಗಿ ಹೊಂದಿದ್ದ ವಿಮೋಚನಾತ್ಮಕ ಯೋಜನೆಯನ್ನು ಯಾವ ಕುಟುಂಬದ ಮುಖಾಂತರವಾಗಿ ಕಾರ್ಯರೂಪಕ್ಕೆ ತರುವದಕ್ಕಿದ್ದನೋ ಆ ಆದುಕೊಂಡ ಕುಟುಂಬದವರನ್ನು ಗುರುತಿಸುತ್ತದೆ. 11ನೇ ಅಧ್ಯಾಯದಲ್ಲಿನ ಕಥನವು ಹೆಚ್ಚು ಸಂಕುಚಿತವಾಗಿದೆ, ಪ್ರತಿಯೊಂದು ತಲೆಮಾರಿಗೆ ಸೇರಿದ ಒಬ್ಬೊಬ್ಬ ವ್ಯಕ್ತಿಯನ್ನು ಮಾತ್ರವೇ ಹೆಸರಿಸುತ್ತಾ ತೇರಹನ ತನಕ ಸಾಗುತ್ತದೆ. ತರುವಾಯ ತೇರಹನ ಮೂವರು ಪುತ್ರರ ಹೆಸರುಗಳು ಕೊಡಲ್ಪಟ್ಟಿವೆ; ಅಬ್ರಾಮ (ಅಥವಾ ಅಬ್ರಹಾಮ), ನಾಹೋರ, ಮತ್ತು ಹಾರಾನ. ಪಟ್ಟಿಯಲ್ಲಿ ಮೊದಲಿಗೆ ಹೆಸರಿಸಲ್ಪಟ್ಟಿರುವ ಅಬ್ರಹಾಮನು ಕುಟುಂಬದೊಳಗೆ ಅತ್ಯಂಥ ಪ್ರಾಮುಖ್ಯವಾದ ವ್ಯಕ್ತಿಯಾದನು.

5 ಮತ್ತು 10 ಅಧ್ಯಾಯಗಳಲ್ಲಿರುವಂತೆಯೇ, "10" ಮತ್ತು "7" ಸಂಖ್ಯೆಗಳು 11ನೇ ಅಧ್ಯಾಯದಲ್ಲಿ ಮಹತ್ವಪೂರ್ಣವಾಗಿವೆ. ಉದಾಹರಣೆಗೆ, 5ನೇ ಅಧ್ಯಾಯದಲ್ಲಿ ಆದಾಮನ ನಂತರದಲ್ಲಿ ಬರುವ ಪಟ್ಟಿಯು ಹತ್ತು ಹೆಸರುಗಳನ್ನೊಳಗೊಂಡಿದ್ದು, ನೋಹ ಮತ್ತು ಆತನ ಮೂವರು ಪುತ್ರರೊಂದಿಗೆ ಮುಕ್ತಾಯವಾಗುತ್ತದೆ: ಶೇಮ್, ಹಾಮ್, ಮತ್ತು ಯೆಫೆತ್ (5:32). ನೋಹನು ಪ್ರಳಯಪೂರ್ವದ ಯುಗ ಮತ್ತು ಪ್ರಳಯ-ನಂತರದ ಯುಗಗಳ ನಡುವೆ

ಸೇತುವೆಯಾಗಿದ್ದನಾದ್ದರಿಂದ, 11ನೇ ಅಧ್ಯಾಯದಲ್ಲಿ ಆತನಿಂದ ಆರಂಭಿಸಿ ತೇರಹನ ತನಕದ ಶೇಮನ ಸಂತತಿಯವರನ್ನು ಲೆಕ್ಕಿಸುವುದು ಅರ್ಥಪೂರ್ಣವಾಗಿರುವಂತೆ ಮಾಡುತ್ತದೆ. ಪಟ್ಟಿಯು ಹತ್ತು ತಲೆಮಾರುಗಳನ್ನು ಒಳಗೊಂಡಿದ್ದು, ತೇರಹನ ಮೂವರು ಪುತ್ರರೊಂದಿಗೆ ಮುಕ್ತಾಯಗೊಳ್ಳುತ್ತದೆ: "ಅಬ್ರಾಮ, ನಾಹೋರ, ಹಾರಾನ" (11:26).[10] ಪ್ರಳಯ-ನಂತರದ ಯುಗದಲ್ಲಿ ನೋಹನನ್ನು ಲೆಕ್ಕದಲ್ಲಿ ಎಣಿಸದಿದ್ದಲ್ಲಿ, ಅಬ್ರಹಾಮನು ಶೇಮನಿಂದ ಹತ್ತನೆಯ ಮತ್ತು ಆದಾಮನಿಂದ ಇಪ್ಪತ್ತನೆಯ (10 x 2) ತಲೆಮಾರಿನವನಾಗುತ್ತಾನೆ.[11] ಅಲ್ಲದೆ ಈತನು ಎಬರನಿಂದ ಏಳನೆಯ ತಲೆಮಾರಿನವನು ಸಹ ಆಗುತ್ತಾನೆ, ಈತನಿಂದಲೇ ಇಬ್ರಿಯರು ಉದಯಿಸಿದರು, ಮತ್ತು ಎಬರನು ಸ್ವತಃ ಆದಾಮನಿಂದ ಹದಿನಾಲ್ಕನೆಯ (7 x 2) ತಲೆಮಾರಿನವನಾಗಿರುತ್ತಾನೆ.[12]

"7" ಸಂಖ್ಯೆಯು ಸಂಪೂರ್ಣತೆ ಮತ್ತು ಪರಿಪೂರ್ಣತೆಯನ್ನು ಸಂಕೇತಿಸುವದಾದ್ದರಿಂದ, ಅಬ್ರಹಾಮನು ಎಬರನಿಂದ ಏಳನೆಯ ತಲೆಮಾರಿನವನಾಗುತ್ತಾನೆಂಬ ವಾಸ್ತವಾಂಶವು ಆತನು ಒಂದು ಪ್ರಖ್ಯಾತ "ಹೆಸರು" ಪಡೆದುಕೊಳ್ಳುವದರೊಂದಿಗೆ ತಾಳೆಯಾಗುತ್ತದೆ (12:2). ದೇವರಿಂದ ಒಂದು ಕುಂದಿಲ್ಲದ ವರದಾನವಾಗಿ, ಅಂಥ "ಹೆಸರು" (ಪ್ರಸಿದ್ಧಿ) ಆತನ ಮೂಲಕವಾಗಿ "ಭೂಲೋಕ ಎಲ್ಲಾ ಕುಲಗಳನ್ನು" ಆಶೀರ್ವದಿಸಬೇಕೆಂಬ (12:3) ದೇವರ ಕೃಪೆಯುಳ್ಳ ಯೋಜನೆಯ ಪರಿಪೂರ್ಣತೆಯನ್ನು ತೋರಿಸುತ್ತದೆ. ಆತನು ವಿಶ್ವಾಸಿಸುವವರಿಗೆಲ್ಲಾ ಪಿತೃವಾಗಲಿದ್ದನು (ರೋಮಾ 4:11). ಇದೆಲ್ಲವೂ ದೇವರನ್ನು ಮಹಿಮೆ ಪಡಿಸುವದಕ್ಕೆ ಸಂಭವಿಸಲಿತ್ತು. ಅಬ್ರಹಾಮನ ಕುರಿತಾದ ಈ ವಿಚಾರಗಳು, ಸ್ವ-ಹೆಚ್ಚಳವನ್ನು ಸಂಕೇತಿಸುವಂಥ ಒಂದು ಗೋಪುರವನ್ನು ಕಟ್ಟುವ ಮೂಲಕ ತಮಗೋಸ್ಕರ ಒಂದು "ಹೆಸರು" (ಪ್ರಸಿದ್ಧಿ) ಸಂಪಾದಿಸಿಕೊಳ್ಳಬೇಕೆಂದು (11:1-9) ಅಪೇಕ್ಷಿಸಿದ ಬಾಬೆಲಿನ ಜನರಿಗೆ ತದ್ವಿರುದ್ಧವಾಗಿರುತ್ತವೆ. ಅವರ ಪ್ರಯಾಸದ ಅಂತಿಮ ಫಲವು ಒಂದು ದೊಡ್ಡ *ಹೆಸರ*ನ್ನು ಸಂಪಾದಿಸಿಕೊಳ್ಳಲು ವಿಫಲವಾಗುವದೇ ಆಗಿತ್ತು; ಅವರು ಭವಿಷ್ಯದ ತಲೆಮಾರುಗಳಿಗೆ ಕೇವಲ *ಅವಮಾನ*ದ ಪರಂಪರೆಯನ್ನಷ್ಟೇ ಬಿಟ್ಟು ಹೋದರು.

**ವಚನಗಳು 10, 11.** 3:15ಲ್ಲಿ ಸ್ತ್ರೀಗೆ ಮಾಡಿದ ವಾಗ್ದಾನವನ್ನು ಕಾರ್ಯರೂಪಕ್ಕೆ ತರುವವರಾಗಿದ್ದ ನೋಹನ ಸಂತತಿಯವರ ವಂಶವು ಈಗ, ನಾವು ಆದಿಕಾಂಡದಲ್ಲಿ ಮುಂಚೆ ನಾಲ್ಕು ಸಾರಿ ನೋಡಿದ ಒಂದು ಪರಿಚಿತವಾದ ಶೀರ್ಷಿಕೆಯೊಂದಿಗೆ ಸಂಬಂಧ ಹೊಂದಿದೆ. ಈ ಸಾರಿ, ಅಧ್ಯಾಯದ ಅಂತ್ಯದಲ್ಲಿ ಅಬ್ರಹಾಮನ ತನಕ ಸಾಗುವಂಥ **ಶೇಮನ ವಂಶದವರ**ನ್ನು [תוֹלְדוֹת, *ಟೋಲೆಡೊಥ]* ಪಟ್ಟಿಮಾಡುತ್ತದೆ.

ವಾಕ್ಯವು ಹೇಳುವದೇನೆಂದರೆ **ಜಲಪ್ರಳಯವು ಕಳೆದು ಎರಡು ವರುಷಗಳಾದ ಮೇಲೆ ಶೇಮನು ನೂರು ವರುಷದವನಾಗಿ ಅರ್ಪಕ್ಷದನನ್ನು ಪಡೆದನು**. ಶೇಮನು ನೋಹನ ಮೂವರು ಮಕ್ಕಳಲ್ಲಿ ಹಿರಿಯವನಾಗಿದ್ದನು ಎಂಬುದಾಗಿ ಯೋಚಿಸುವವರಿಗೆ ಈ ಹೇಳಿಕೆಯು ಒಂದು ಕಠಿಣತೆಯನ್ನು ಮುಂದಿಡುತ್ತದೆ (10:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 5:32 ಮತ್ತು 7:6ರಲ್ಲಿನ ಅಕ್ಷರಶಃ ಮಾತುಗಳು ಸೂಚಿಸುವದೇನೆಂದರೆ ಭೂಮಿಯ ಮೇಲೆ ಪ್ರಳಯವು ಉಂಟಾದ ವೇಳೆ ನೋಹನ ಹಿರಿಯ ಮಗನಿಗೆ ನೂರು ವರ್ಷವಾಗಿದ್ದವು ಎಂದು ಸೂಚಿಸುತ್ತವೆ, ಆದಾಗ್ಯೂ 11:10ನೇ ವಚನವು ಪ್ರಳಯದ ಮುಕ್ತಾಯದ ವೇಳೆ ಶೇಮನು 98 ವಯಸ್ಸಿನವಾಗಿದ್ದನು ಎಂದು ಸೂಚಿಸುತ್ತದೆ. ಈ ಹೊಂದಾಣಿಕೆಯಿಲ್ಲ ಎಂಬಂತೆ ತೋರುವದನ್ನು ಹೇಗೆ ಸರಿಪಡಿಸಲು ಸಾಧ್ಯವಿರುತ್ತದೆ?

ಆದಿಕಾಂಡ 5:32ನೇ ವಚನದ ತಾತ್ಪರ್ಯವು ತಾನು 500 ವಯಸ್ಸಿನವಾಗಿದ್ದ ವೇಳೆ

ನೋಹನು ಶೇಮ್, ಹಾಮ್, ಮತ್ತು ಯೆಫೆತ್ ಇವರನ್ನು ಪಡೆದನು ಎಂದಷ್ಟೆ ಅಗಿರಬಹುದು (ನೋಡಿರಿ NRSV; NIV). ವಚನವನ್ನು ಆ ವಿಧದಲ್ಲಿ ಅರ್ಥಮಾಡಿಕೊಳ್ಳುವದಾದರೆ, ಸಮಸ್ಯೆಯು ಬಗೆಹರಿಸಲ್ಪಡುತ್ತದೆ ಯಾಕೆಂದರೆ ನೋಹನಿಗೆ 502 ವಯಸ್ಸಿರುವ ವೇಳೆ ಶೇಮನು ಹುಟ್ಟಿರಬಹುದಾಗಿದೆ; ಆಗ ನೋಹನಿಗೆ 602 ವಯಸ್ಸಾಗಿದ್ದ ವೇಳೆ ಇವನಿಗೆ 100 ವಯಸ್ಸು ಇರಬಹುದಾಗಿತ್ತು, ಅದು ಪ್ರಳಯವಾಗಿ ಎರಡು ವರ್ಷದ ನಂತರವಾಗುತ್ತದೆ (ನೋಡಿರಿ 7:6; 8:13).

ಇತರ ಪರಿಹಾರಗಳ ಸಾಧ್ಯತೆಯೂ ಇರುತ್ತದೆ. 11:10ರಲ್ಲಿ ಪ್ರಸ್ತಾಪಿಸಲಾಗಿರುವ 100 ವರ್ಷಗಳು ಎಂಬುದು ಕೇವಲ ಒಂದು ಪೂರ್ಣಾಂಕವಾಗಿರಬಹುದಾಗಿದೆ, ಅಥವಾ 5:32ರಲ್ಲಿನ 500 ಎಂಬುದನ್ನು ಆ ವಿಧದಲ್ಲಿ ಅರ್ಥಮಾಡಿಕೊಳ್ಳತಕ್ಕದ್ದು ಆಗಿರಬಹುದು. ಅಂತೂ, ಒಬ್ಬನು 5:32ನ್ನು ಅಕ್ಷರಶಃ ಅರ್ಥನಿರೂಪಣೆ ಮಾಡುವದಾದರೆ, ಆತನು ಶೇಮ್, ಹಾಮ್, ಮತ್ತು ಯೆಫೆತ್ ಇವರು ತ್ರಿವಳಿಗಳಾಗಿದ್ದರು ಎಂದು ವಾದಿಸಬೇಕಾಗುತ್ತದೆ - ಮತ್ತು ಅಂಥ ಅಭಿಪ್ರಾಯಕ್ಕೆ ಶಾಸ್ತ್ರಗಳಲ್ಲಿ ಯಾವ ಆಧಾರವೂ ಇರುವದಿಲ್ಲ.[13]

ಹೇಗೂ, ಯೆಫೆತನು ನೋಹನ ಹಿರಿಯ ಮಗನಾಗಿದ್ದಲ್ಲಿ ಯಾವದೇ ಕಾಲಾನುಕ್ರಮದ ಸಮಸ್ಯೆಯೂ ಇರುವದಿಲ್ಲ (10:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಪ್ರಕರಣದಲ್ಲಿ, ಯೆಫೆತನು ಪ್ರಳಯದ ಬಂದ ವೇಳೆ 100 ವಯಸ್ಸಿನವನಾಗಿರಬಹುದು, ಮತ್ತು ಪ್ರಳಯದ ಅಂತ್ಯದ ವೇಳೆ ಶೇಮನಿಗೆ 98 ವಯಸ್ಸಿದ್ದಿರಬಹುದು. ಸರಳವಾಗಿ ಹೇಳುವದಾದರೆ, ಯೆಫೆತನು ಶೇಮನಿಗಿಂತಲೂ ಎರಡು ಅಥವಾ ಮೂರು ವರ್ಷ ದೊಡ್ಡವನಾಗಿದ್ದನು. ಮೂವರೊಳಗೆ ಹಾಮನು ಅತಿ ಕಿರಿಯವನು (9:24). ಈ ಮಾತುಗಳ ಪ್ರಕಾರ ಜನನ ಕ್ರಮವನ್ನು ಯೆಫೆತ್, ಶೇಮ್, ಮತ್ತು ಹಾಮ್ ಎಂದಾಗಿಸುತ್ತದೆ. ಶೇಮನನ್ನು ಮೊದಲಲ್ಲಿ ಇಡುವಂಥ ಸಾಮಾನ್ಯವಾದ ಕ್ರಮವು ಕಾಲಾನುಕ್ರಮಕ್ಕಿಂತಲೂ ದೈವಶಾಸ್ತ್ರವನ್ನು ಪ್ರತಿಬಿಂಬಿಸುತ್ತಿರಬಹುದಾಗಿದೆ.

ತರುವಾಯ, ವಾಕ್ಯವು ಹೇಳುವದೇನೆಂದರೆ **ಅವನು ಅರ್ಪಕ್ಷದನನ್ನು ಪಡೆದ ಮೇಲೆ ಗಂಡು ಹೆಣ್ಣು ಮಕ್ಕಳನ್ನು ಪಡೆದು ಐನೂರು ವರುಷ ಬದುಕಿದನು**. 10:22ರಲ್ಲಿ, ಅರ್ಪಕ್ಷದನು ಶೇಮನ ನಾಲ್ವರು ಪುತ್ರರೊಳಗೆ ಮೂರನೆಯವನು ಎಂದು ಹೇಳಲಾಗಿರುತ್ತದೆ, ಆದ್ದರಿಂದ ವಂಶದ ಆದ್ಯತೆಯು ದೇವರ ಆಯ್ಕೆಯ ಮೇಲೆ ಆಧಾರವಾಗಿತ್ತು, ಹೊರತು ಯಾವ ಮಗನು ಮೊದಲಲ್ಲಿ ಹುಟ್ಟಿದನು ಎಂಬುದರ ಮೇಲಲ್ಲ. ಅಲ್ಲದೆ, ಶೇಮನು 100 ವಯಸ್ಸಿನವನಾಗಿದ್ದ ವೇಳೆ ಮಕ್ಕಳನ್ನು ಪಡೆಯುವದು ಮತ್ತು 600 ವಯಸ್ಸಿನಲ್ಲಿ ಮರಣಿಸುವುದು ಆತನನ್ನು ಪ್ರಳಯದ ಮುಂಚೆ ಜೀವಿಸಿದವರ ಹಾಗೂ ಅ ಕಾಲದ ನಂತರ ಜೀವಿಸಿದವರ ನಡುವೆ ಒಂದು ಪರಿವರ್ತನೆಯ ವ್ಯಕ್ತಿಯನ್ನಾಗಿ ಮಾಡುತ್ತದೆ. ಉದಾಹರಣೆಗೆ, 5ನೇ ಅಧ್ಯಾಯದಲ್ಲಿ, ಮಕ್ಕಳಿಗೆ ತಂದೆಯಾದವರ ಸರಾಸರಿ ವಯಸ್ಸು 156 ಆಗಿತ್ತು, ಮತ್ತು ಮರಣದಲ್ಲಿನ ಸರಾಸರಿ ವಯಸ್ಸು 858 ಆಗಿತ್ತು. 11ನೇ ಅಧ್ಯಾಯದಲ್ಲಿ, ಪ್ರಳಯ-ನಂತರದ ಸರಾಸರಿ ವಯಸ್ಸು ಮಕ್ಕಳಿಗೆ ತಂದೆಯಾಗುವಾಗ ಅವರ ವಯಸ್ಸು 43 ಮತ್ತು ಮರಣಿಸುವ ವೇಳೆ 333 ಆಗಿತ್ತು.

**ವಚನಗಳು 12, 13. ಅರ್ಪಕ್ಷದನು ಶೆಲಹ**ನನ್ನು ಪಡೆದ ವೇಳೆ 35 ವಯಸ್ಸಿನವನಾಗಿದ್ದನು, ಮತ್ತು ಶೆಲಹನ ಜನನದ ಬಳಿಕ ಆತನು 403 ವರ್ಷಗಳ ಕಾಲ ಬದುಕುವವನಾಗಿ, 438 ವರ್ಷಗಳ ಕಾಲ ಇದ್ದನು (10:24ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಳಯದ ನಂತರದಲ್ಲಿ ಮೂಲಪಿತೃಗಳ ಆಯುಷ್ಯಗಳು ಕಡಿಮೆಗೊಳಿಸಲ್ಪಟ್ಟವು, ಅದರಲ್ಲಿ ಅರ್ಪಕ್ಷದನ ಆಯುಷ್ಯವು (438) ಆತನ ತಂದೆಯಾದ ಶೇಮನ ಆಯುಷ್ಯದಲ್ಲಿ (600) ಮೂರರೊಳಗೆ

ಎರಡು ಭಾಗಷ್ಟು ಆಗಿತ್ತು. ಇದನ್ನು ಕೆಲವರು ಮನುಷ್ಯನ ಆಯುಷ್ಯ 120 ವರ್ಷಗವಾಗಿ ಕಡಿಮೆಗೊಳ್ಳುವದರ ಆರಂಭವೆಂದು ಭಾವಿಸುತ್ತಾರೆ (6:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನಗಳು 14, 15. ಶೆಲಹನು** 30 ವಯಸ್ಸಿನವನಾಗಿದ್ದ ವೇಳೆ ಆತನಿಗೆ **ಎಬರನು** ಹುಟ್ಟಿದನು. ಶೆಲಹನು ಇನ್ನೂ 403 ವರ್ಷಗಳ ಕಾಲ ಬದುಕಿ 433 ವಯಸ್ಸಿನ ವರೆಗೂ ಇದ್ದನು (10:24ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನಗಳು 16, 17. ಎಬರನು** 34 ವರ್ಷದವನಾಗಿದ್ದ ವೇಳೆ **ಪೆಲೆಗ**ನನ್ನು ಪಡೆದನು. ಆತನು ಇನ್ನು 430 ವರ್ಷ ಬದುಕಿದ ಬಳಿಕ 464 ವಯಸ್ಸಿನಲ್ಲಿ ಮರಣಿಸಿದನು (10:24ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೆಹೂದ್ಯರು ಎಬರನಿಂದ ಉದಯಿಸಿದರು, ಈತನು ವಂಶಾವಳಿಯ ದಾಖಲೆಯೊಳಗೆ ಅಷ್ಟೇನೂ ಗಮನವನ್ನು ಪಡೆದುಕೊಳ್ಳದಿದ್ದಾಗ್ಯೂ, "ಇಬ್ರಿಯರು" ಎಂಬ ಹೆಸರು ಈತನ ಹೆಸರಿನಿಂದಲೇ ಬಂದಿರುವದು ಸ್ಪಷ್ಟವಾಗಿರುತ್ತದೆ.

**ವಚನಗಳು 18, 19. ಪೆಲೆಗನು** 30 ವಯಸ್ಸಿನವನಾಗಿದ್ದ ವೇಳೆ **ರೂಗ**ನನ್ನು ಪಡೆದನು. ಆತನು ಇನ್ನು 209 ವರ್ಷಗಳ ಕಾಲ ಬದುಕಿದನು, ಆತನ ಒಟ್ಟು ಆಯುಷ್ಕಾಲವು 239 (10:25ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪೆಲೆಗನಿಂದ ಮೊದಲ್ಗೊಂಡು, ಶೇಮನ ವಂಶದಲ್ಲಿದ್ದವರ ಆಯುಷ್ಕಾಲವು ತೀವ್ರವಾಗಿ ಕಡಿಮೆಯಾಗುತ್ತಾ ಹೋಯಿತು. ಪೆಲೆಗನು ತನ್ನ ತಂದೆಯಾದ ಎಬರನ ಆಯುಷ್ಕಾಲದಲ್ಲಿ ಸುಮಾರು ಅರ್ಧದಷ್ಟು ಕಾಲ ಬದುಕಿದನು. ಈತನು ಎಬರನ ಆದುಕೊಂಡಿರುವ ಹಾಗೂ ಆದುಕೊಳ್ಳಲ್ಪಡದ ಸಂತತಿಯವರ ನಡುವಿನ ವಿಭಜನೆಯ ಗುರುತು ಸಹ ಮಾಡುತ್ತಾನೆ. ಈ ಎರಡು ವಂಶಗಳ ವಿಭಜನೆಯು ಅವರ ವ್ಯಕ್ತಿಗತ ಸಂತತಿಯವರ ರಕ್ಷಣೆಯನ್ನಾಗಲಿ ಅಥವಾ ನಾಶನವನ್ನಾಗಲಿ ನಿರ್ಧರಿಸಲಿಲ್ಲ, ಆದರೆ ಅಬ್ರಹಾಮ, ಇಸ್ರಾಯೇಲ್, ಮತ್ತು ಅಂತಿಮವಾಗಿ ಯೇಸು ಕ್ರಿಸ್ತನನ್ನು ಲೋಕದೊಳಗೆ ಬರಮಾಡುವದಕ್ಕಾಗಿ ದೇವರು ಯಾವ ವಂಶವನ್ನು ಉಪಯೋಗಿಸಿಕೊಳ್ಳುವನು ಎಂಬುದನ್ನು ಇದು ಗುರುತಿಸುವದಾಗಿದೆ.

**ವಚನಗಳು 20, 21.** ಪೆಲೆಗನ ಮಗನಾದ **ರೂಗ**ನು ಹಳೆಯ ಒಡಂಬಡಿಕೆಯೊಳಗೆ ಈ ಸನ್ನಿವೇಶದಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತಾನೆ, ಆದರೆ ಕೆಲವರು ಈ ಹೆಸರನ್ನು "ರೆಗೂವೇಲ" ಎಂಬುದರೊಂದಿಗೆ ಸಂಬಂಧಗೊಳಿಸುತ್ತಾರೆ. ಏಸಾವನ ಮಗನೊಬ್ಬನಿಗೆ ಈ ಹೆಸರಿತ್ತು (36:4, 10, 13), ಮತ್ತು ಮತ್ತೊಬ್ಬ "ರೆಗೂವೇಲ"ನು ಮೋಶೆಯ ಮಾವನಾಗಿದ್ದನು (ವಿಮೋಚನಕಾಂಡ 2:18). ಈ ಹೆಸರಿನ ಅರ್ಥವು "ದೇವರ ಸ್ನೇಹಿತ" ಎಂದಾಗಿರಬಲ್ಲದು. ರೆಗೂವನು 32 ವಯಸ್ಸಿವನಾಗಿದ್ದ ವೇಳೆ **ಸೆರೂಗ**ನನ್ನು ಪಡೆದನು ಮತ್ತು ಬಳಿಕ ಆತನು ಇನ್ನು 207 ವರ್ಷಗಳ ಕಾಲ ಜೀವಿಸಿದನು. ಆತನ ತಂದೆಯಾದ ಪೆಲೆಗನ ಹಾಗೆಯೇ, ಈತನು 239 ವರ್ಷದವನಾಗಿದ್ದ ವೇಳೆ ಮರಣಿಸಿದನು.

**ವಚನಗಳು 22, 23. ಸೆರೂಗ** ಎಂಬ ಹೆಸರು ಈ ವ್ಯಕ್ತಿಯನ್ನು ಪೆಲೆಗನ ಒಬ್ಬ "ಸಂತಾನ" ಅಥವಾ "ಕಿರಿಯ ಕೊಂಬೆ" ಎಂದು ಗುರುತಿಸಬಹುದು. ಇದು שָׂרִיג *(ಸಾರಿಗ)* ಎಂಬ ಇಬ್ರಿಯ ಪದದೊಂದಿಗೆ ಸಂಬಂಧವನ್ನು ಹೊಂದಿರಬಹುದು, ಈ ಪದದ ಅರ್ಥವು "ಬಳ್ಳಿಯ ಹಬ್ಬು" ಅಥವಾ "ರೆಂಬೆ."[14] "ಸೆರೂಗ" ಎಂಬುದು ನವ-ಅಶ್ಶೂರ್ಯದ ಸಾರೂಗಿ ಸ್ಥಳದೊಂದಿಗೆ ಸಂಬಂಧವನ್ನು ಹೊಂದಿರಬಹುದಾಗಿದೆ, ಇದು ವಾಯುವ್ಯದ ಮೆಸಪೊತಾಮ್ಯದಲ್ಲಿರುವ ಪ್ರಾಚೀನ ಹಾರಾನಿಗೆ ಪೂರ್ವ ದಿಕ್ಕಿನಲ್ಲಿ ಸುಮಾರು ಮೂವತ್ತೈದು ಮೈಲಿಗಳಷ್ಟು ದೂರವಿರುತ್ತದೆ.[15] 30ನೇ ವಯಸ್ಸಿನಲ್ಲಿ, ಸೆರೂಗನು **ನಾಹೋರ**ನನ್ನು ಪಡೆದನು, ಮತ್ತು ಬಳಿಕ

ಆತನು ಇನ್ನು 200 ವರ್ಷಗಳ ಕಾಲ ಜೀವಿಸಿದನು. ಸೆರೂಗನು ಮರಣಿಸುವ ವೇಳೆ 230 ವಯಸ್ಸಿನವನಾಗಿದ್ದನು.

**ವಚನಗಳು 24, 25. ನಾಹೋರ**ನು 29 ವಯಸ್ಸಿನವನಾಗಿದ್ದ ವೇಳೆ **ತೆರಹ**ನನ್ನು ಪಡೆದನು. ಅದಾದ ಮೇಲೆ, ಆತನು ಮರಣಿಸುವ ಮುನ್ನ ಇನ್ನು 119 ವರ್ಷಗಳ ಕಾಲ ಬದುಕಿದನು. ಆತನ ಒಟ್ಟಾರೆ ಆಯುಷ್ಯವು 148 ವರ್ಷಗಳು.

**ವಚನ 26. ತೆರಹ**ನು ಈ ವಿಭಾಗದಲ್ಲಿ ಪರಿಚಯಿಸಲ್ಪಟ್ಟ ಕೊನೆಯ ವ್ಯಕ್ತಿಯಾಗಿದ್ದಾನೆ. ಆತನು ಮೂವರು ಪುತ್ರರಿಗೆ ತಂದೆಯಾದ ವೇಳೆ 70 ವಯಸ್ಸಿನವನಾಗಿದ್ದನು. ತೆರಹನು **ಅಬ್ರಾಮ, ನಾಹೋರ, ಹಾರಾನ ಎಂಬ ಮಕ್ಕಳನ್ನು ಪಡೆದನು** ಮತ್ತು ಈ ಕಾರಣದಿಂದ ಈ ಮೂವರು ವ್ಯಕ್ತಿಗಳಿಂದ ಹುಟ್ಟಿದ ಸಕಲ ಜನಾಂಗಗಳಿಗೆ ಮೂಲಪಿತೃವಾದನು. ಈತನು ಇನ್ನು 135 ವರ್ಷಗಳ ಕಾಲ ಬದುಕಿದನು ಹಾಗೂ 205ನೇ ವಯಸ್ಸಿನಲ್ಲಿ ಮರಣಿಸಿದನು (11:32).

"ನಾಹೋರ" ಎಂಬ ಹೆಸರು ಅಬ್ರಹಾಮನ ಅಜ್ಜನಿಗೆ ಇದ್ದ ಹೆಸರಾಗಿತ್ತು (11:24) ಮತ್ತು ಆತನ ಸಹೋದರರೊಳಗೆ ಒಬ್ಬನಿಗಿದ್ದ ಹೆಸರು ಸಹ ಆಗಿತ್ತು (11:26). ಕಡೆಯವನು ಮೂಲಪಿತೃಗಳ ಕಥೆಗಳೊಳಗೆ ಒಂದು ಪ್ರಾಮುಖ್ಯವಾದ ಪಾತ್ರವನ್ನು ನಿರ್ವಹಿಸಿದನು (22:20-24; 31:53), ಮತ್ತು 24:10ರಲ್ಲಿ "ನಾಹೋರನು ವಾಸಿಸಿದ ಊರು" ಪ್ರಸ್ತಾಪಿಸಲ್ಪಟ್ಟಿರುತ್ತದೆ. ಕೆಲವರು ಈ ಹೆಸರನ್ನು ನಾಹೋರ ನಗರದೊಂದಿಗೆ ಸಂಬಂಧಗೊಳಿಸಿರುತ್ತಾರೆ, ಹಲವಾರು ಪ್ರಾಚೀನ ಮೆಸಪೊತಾಮ್ಯದ ಬರಹಗಳ ಪ್ರಕಾರವಾಗಿ, ಇದು ಹಾರಾನಿನ ಸಮೀಪದಲ್ಲಿತ್ತು.[16] "ನಾಹೋರನು ವಾಸಿಸಿದ ಊರು" ಎಂಬುದು ಬಹುಶಃ ಆ ಊರಿಗೆ ಇರುವ ಹೆಸರನ್ನು ಸೂಚಿಸುವದಿಲ್ಲ, ಆದರೆ ಆತನು ಅಲ್ಲಿ ವಾಸಿಸಿದ್ದನು ಎಂಬುದನ್ನು ಸೂಚಿಸುತ್ತದೆ, ಅದು ಹಾರಾನ್ ಆಗಿತ್ತು (11:31; 27:43; 28:10; 29:4).

## ತೆರಹನ ಕುಟುಂಬ (11:27-32)

ಮುಂದಿನ ವಿಭಾಗವು ವಿಶೇಷ ಪ್ರಾಮುಖ್ಯತೆಯುಳ್ಳದ್ದು ಯಾಕೆಂದರೆ ಅದು 1ರಿಂದ 11 ಅಧ್ಯಾಯಗಳಲ್ಲಿನ ಆದಿಯುಗದ ಇತಿಹಾಸದಿಂದ 12ರಿಂದ 50 ಅಧ್ಯಾಯಗಳಲ್ಲಿನ ಆರಿಸಿಕೊಂಡ ದೇವರ ಜನರ ಮೂಲಪಿತೃಗಳ ಇತಿಹಾಸಕ್ಕೆ ಒಂದು ಸ್ಥಿತ್ಯಂತರವನ್ನು ಒದಗಿಸುತ್ತದೆ. ಇಲ್ಲಿ ಅಬ್ರಾಮ ಅಥವಾ ಅಬ್ರಹಾಮನ ಪರಿಚಯವಿರುತ್ತದೆ, ಈತನು ಬೈಬಲಿಕ ಕಥೆಗೆ ಎಷ್ಟೊಂದು ಮುಖ್ಯವಾಗಿರುತ್ತಾನೆಂದರೆ ದೇವರು ತನ್ನನ್ನು "ಅಬ್ರಹಾಮನ ದೇವರು" ಮತ್ತು ಆತನ ಸಂತಾನದವರು ದೇವರು ಎಂದು ವಿಮೋಚನಕಾಂಡ 3:6, 15ರಲ್ಲಿ ಗುರುತಿಸಿಕೊಂಡನು. ಪೌಲನು ಕ್ರೈಸ್ತರನ್ನು "ಅಬ್ರಹಾಮನ ಮಕ್ಕಳು" ಎಂದು ಕರೆದನು (ಗಲಾತ್ಯ 3:7).

### ತೆರಹನ ವಂಶ (11:27-30)

**[27]ತೆರಹನ ವಂಶದವರ ಚರಿತ್ರೆ. ತೆರಹನು ಅಬ್ರಾಮ ನಾಹೋರ ಹಾರಾನರನ್ನು ಪಡೆದನು. [28]ಹಾರಾನನು ಲೋಟನನ್ನು ಪಡೆದನು. ಹಾರಾನನು ತಾನು ಹುಟ್ಟಿದ ದೇಶದೊಳಗೆ ಕಲ್ದೀಯರ ಊರ್ ಎಂಬ ಪಟ್ಟಣದಲ್ಲಿ ತನ್ನ ತಂದೆಯಾದ ತೆರಹನ ಹತ್ತಿರವೇ ಸತ್ತನು. [29]ಅಬ್ರಾಮನೂ ನಾಹೋರನೂ ಮದುವೆಮಾಡಿಕೊಂಡರು. ಅಬ್ರಾಮನ ಹೆಂಡತಿಯ ಹೆಸರು ಸಾರಯಳು, ನಾಹೋರನ ಹೆಂಡತಿಯ ಹೆಸರು ಮಿಲ್ಕಾ; ಈಕೆಯು ಹಾರಾನನ ಮಗಳು; ಹಾರಾನನು**

**ಮಿಲ್ಕಳಿಗೂ ಇಸ್ಕಳಿಗೂ ತಂದೆ. [30]ಸಾರಯಳು ಬಂಜೆಯಾಗಿದ್ದದರಿಂದ ಆಕೆಗೆ ಮಕ್ಕಳಿರಲಿಲ್ಲ.**

**ವಚನಗಳು 27, 28. ತೇರಹನ ವಂಶದವರ** [תּוֹלְדוֹת, *ಟೋಲೆಡೊಥ್]* ಚರಿತ್ರೆಯು ಆರು ಕ್ಲುಪ್ತವಾದ ವಚನಗಳಲ್ಲಿ (11:27-32) ತಿಳಿಸಲ್ಪಟ್ಟಿರುತ್ತದೆ. ಆದಿಕಾಂಡದಲ್ಲಿ ತೆರಹನು ಪುನಃ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಮತ್ತು ಬಹುಶಃ ಆತನು ಅಬ್ರಹಾಮನ ನಂಬಿಕೆಯಲ್ಲಿ ಪಾಲುಗಾರನಾಗಿರಲಿಲ್ಲ ಎಂದು ತೋರುತ್ತದೆ. **ಅಬ್ರಾಮ ನಾಹೋರ ಹಾರಾನ** ಇವರು ತೆರಹನ ಪುತ್ರರೆಂದು ಪಟ್ಟಿ ಮಾಡಲ್ಪಟ್ಟಿದ್ದಾರೆ, ಆದರೆ ಹೆಸರುಗಳು ಅವರ ಜನನದ ಕ್ರಮಾನುಸಾರವಾಗಿ ಕೊಡಲ್ಪಟ್ಟಿರದೆ ಇರಬಹುದಾಗಿದೆ. ಪಟ್ಟಿಯಲ್ಲಿ ಅಬ್ರಹಾಮನ ಸ್ಥಾನವು ಬಹುಶಃ ಆತನು ತೆರಹನ ಚೊಚ್ಚಲ ಮಗನೆಂಬ ಕಾರಣಕ್ಕಾಗಿ ಆಗಿಲ್ಲದೆ ಇರಬಹುದು, ಆದರೆ ಆದಿಕಾಂಡ 12:3ರಲ್ಲಿನ ವಾಗ್ದಾನವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವದು ಈತನ ವಂಶವೇ ಆಗಿತ್ತೆಂಬ ಕಾರಣಕ್ಕಾಗಿಯೇ ಆಗಿದೆ. ಕಾಲಾಂತರದಲ್ಲಿ, ಆತನು ತನ್ನ ಹೆಜ್ಜೆಜಾಡುಗಳಲ್ಲಿ ನಡೆಯುವ ನಂಬಿಗಸ್ತರೆಲ್ಲರಿಗೆ ಪಿತೃವಾಗಲಿದ್ದನು (ರೋಮಾ 4:12, 16).

ಅಬ್ರಹಾಮನ ಸಹೋದರನಾದ **ಹಾರಾನನು ಲೋಟನನ್ನು ಪಡೆದನು.** ಆತನು ತನ್ನ ಪೂರ್ವಜರ ಮನೆಯಾದ **ಕಲ್ದೀಯರ ಊರ್ ಎಂಬ ಪಟ್ಟಣದಲ್ಲಿ ತನ್ನ ತಂದೆಯಾದ ತೆರಹನ ಹತ್ತಿರವೇ ಸತ್ತನು**. ಇಲ್ಲಿ ಮತ್ತು 11:31ರಲ್ಲಿ ಊರ್ ಪಟ್ಟಣದ ಉಲ್ಲೇಖವು ನಿಸ್ಸಂದೇಹಕರವಾಗಿ ಪರ್ಸಿಯನ್ ಕೊಲ್ಲಿಯ ಸಮೀಪವಿರುವ ಆಗ್ನೇಯ ಮೆಸಪೋತಾಮ್ಯದಲ್ಲಿರುವ ಮಹಾ ಪಟ್ಟಣ ಎಂದರ್ಥವಾಗಿರುತ್ತದೆ, ಇದು ಉತ್ತರದ ಮೆಸಪೋತಾಮ್ಯದಲ್ಲಿರುವ ಊರ್ಫಾ ಅಥವಾ ಅರ್ಮೆನಿಯದಲ್ಲಿರುವ ಊರಾ ಎಂಬುವುಗಳಿಗೆ ತದ್ವಿರುದ್ಧವಾಗಿರುತ್ತದೆ. ಊರ್ ಕ್ರಿ.ಪೂ. ಮೂರನೆಯ ಸಹಸ್ರಮಾನದಲ್ಲಿ ಒಂದು ಪ್ರಾಮುಖ್ಯವಾದ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರವಾಗಿತ್ತು. ಅದರ ಅತಿ ಶ್ರೇಷ್ಠ ಅರಸರಲ್ಲಿ ಒಬ್ಬನು ಊರ್-ನಮ್ಮು ಎಂಬಾತನಾಗಿದ್ದನು, ಆತನು ತಾನು ತಂದ ಕಾನೂನು ಸಂಹಿತೆ ಹಾಗೂ ಸುಮಾರು ಕ್ರಿ.ಪೂ. 2100ರಲ್ಲಿ ಒಂದು ಬೃಹತ್ ಹಂತಗೋಪುರ ದೇವಾಲಯದ ನಿರ್ಮಾಣಕ್ಕಾಗಿ ಸ್ಮರಿಸಲ್ಪಡುತ್ತಾನೆ, ಈ ಪಳೆಯುಳಿಕೆಗಳು ಈ ದಿನವೂ ಗೋಚರವಾಗಿರುತ್ತವೆ.[17]

"ಕಲ್ದೀಯರ" ಎಂಬ ಪದಗುಚ್ಛದೊಂದಿಗೆ ಊರ್ ಎಂಬುದನ್ನು ಗುರುತಿಸುವುದು ಬಹುಶಃ ಆ ಪಟ್ಟಣವನ್ನು ಅದೇ ಹೆಸರಿರುವಂಥ ಮಿಕ್ಕ ಪಟ್ಟಣಗಳಿಂದ ಪ್ರತ್ಯೇಕಿಸುವದಕ್ಕಾಗಿ ಬಳಸಲ್ಪಟ್ಟಿರುವ ಸಾಧ್ಯತೆಯಿದೆ. ಲಭ್ಯವಿರುವ ಪುರಾವೆಗಳು ಸೂಚಿಸುವದೇನೆಂದರೆ ಕಲ್ದೀಯರು (ಅಶ್ಶೂರಿಯದ *ಕಲ್ದು*) ಮೊದಲು ಪ್ರಾಚೀನ ಬಾಬಿಲೋನಿನ ಪ್ರಾಂತ್ಯದೊಳಗೆ ಕ್ರಿ.ಪೂ. 1000ರ ಹೊತ್ತಿಗೆ, ಅಬ್ರಹಾಮನನು ಅದನ್ನು ಬಿಟ್ಟು ಹೊರಟು ಹೋಗಿ ಸುಮಾರು ಒಂದು ಸಾವಿರ ವರ್ಷಗಳಾದ ಮೇಲೆ ಬಂದಿದ್ದರು ಎಂಬುದೆ. ಇದು ನಿಜವಾಗಿರುವದಾದರೆ, "ಕಲ್ದೀಯರ ಊರ್" ಎಂಬ ಮಾತು ಅಬ್ರಹಾಮನ ಕಾಲದಲ್ಲಿ ಅಥವಾ ಮೋಶೆಯು ಆದಿಕಾಂಡ ಪುಸ್ತಕವನ್ನು ಬರೆಯುವ ವೇಳೆಯಲ್ಲಿ ಬಳಸಲ್ಪಟ್ಟಿರುತ್ತಿರಲಿಲ್ಲ. ಈ ಕಾರಣಕ್ಕಾಗಿ, "ಕಲ್ದೀಯರ ಊರ್" ಎಂಬ ಪದಗುಚ್ಛವು ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಸಂಪಾದಕನೊಬ್ಬನು ಅನಂತರದಲ್ಲಿ ಸೇರ್ಪಡೆಗೊಳಿಸಿದ್ದೆಂದು ತೋರುತ್ತದೆ.

**ವಚನಗಳು 29, 30. ಅಬ್ರಾಮನೂ ನಾಹೋರನೂ** ಊರ್ ಪಟ್ಟಣದಲ್ಲಿರುವಾಗಲೇ ಮದುವೆ ಮಾಡಿಕೊಂಡರು. **ಸಾರಯಳು** ಎಂದು ಕರೆಯಲ್ಪಡುವ **ಅಬ್ರಾಮನ ಹೆಂಡತಿ**, ಅನಂತರದಲ್ಲಿ ಆತನ ಮಲ-ಸಹೋದರಿ ಎಂದು ಗುರುತಿಸಲ್ಪಟ್ಟಿರುತ್ತಾಳೆ (20:2, 5, 12). ಈಕೆಯು **ಬಂಜೆಯಾಗಿದ್ದ**ಳು. **ನಾಹೋರನ ಹೆಂಡತಿಯ ಹೆಸರು ಮಿಲ್ಕಾ.** ಈಕೆಯು **ಹಾರಾನನ ಮಗಳು** ಆಗಿದ್ದಳು, ಅಂದರೆ ನಾಹೋರನು ಸೋದರ ಸಂಬಂಧಿಯನ್ನು ಮದುವೆಯಾದನೆಂದು

ಅರ್ಥವಾಗುತ್ತದೆ.

ಮಲ-ಸಹೋದರಿಯನ್ನು ಮದುವೆ ಮಾಡಿಕೊಳ್ಳುವದನ್ನು ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದೊಳಗೆ ನಿಷೇಧಿಸಲಾಗಿತ್ತು (ಯಾಜಕಕಾಂಡ 18:9; 20:17; ಧರ್ಮೋಪದೇಶಕಾಂಡ 27:22), ಆದರೆ ಚಿಕ್ಕಪ್ಪನು ಸೋದರ ಸಂಬಂಧಿಯನ್ನು ಮದುವೆ ಮಾಡಿಕೊಳ್ಳುವದಕ್ಕೆ ಯಾವದೇ ನಿಷೇಧವಿರಲಿಲ್ಲ, ಹಾಗಿದ್ದಾಗ್ಯೂ ಚಿಕ್ಕಪ್ಪನು ಚಿಕ್ಕಮ್ಮಳನ್ನು ಮದುವೆ ಮಾಡಿಕೊಳ್ಳುವರ ವಿರುದ್ಧ ನಿಷೇಧವಂತೂ ಇತ್ತು (ಯಾಜಕಕಾಂಡ 18:14; 20:20). ಈ ಎರಡು ಸಂಬಂಧಗಳ ವಿಷಯದಲ್ಲಿ ಬೇರೆ ಬೇರೆ ಮೌಲ್ಯಮಾಪನವಿರುವದಕ್ಕೆ ಯಾವ ಕಾರಣವೂ ಕೊಡಲ್ಪಟ್ಟಿರುವದಿಲ್ಲ, ಆದರೆ ಪುರುಷ ಪ್ರಚೋದಕನು ಒಂದು ಹಳೆಯ ತಲೆಮಾರಿಗೆ ಸೇರಿದವನಾಗಿದ್ದನೆಂಬ ಕಾರಣಕ್ಕಾಗಿ ಮೊದಲು ತಿಳಿಸಿದ ಸಂಬಂಧವು ಹೆಚ್ಚು ಸ್ವೀಕಾರರ್ಹವಾಗಿರಬಹುದಾಗಿದೆ ಎಂದು ಕೆಲವರು ಊಹಿಸಿಕೊಂಡಿರಬಹುದು.

ಅಬ್ರಹಾಮನ ಹೆಂಡತಿಯ ಮೂಲ ಹೆಸರು "ಸಾರಯಳು," ಆದರೆ ಅನಂತರದಲ್ಲಿ ಅದು "ಸಾರಳು" ಎಂದು ಬದಲಾಗಿತ್ತು. ಎರಡೂ ವಿಧದ ಹೆಸರುಗಳು ಸಹ ಬಹುಶಃ שָׂרָה *(ಸಾರಹ)* ಎಂಬುದರಿಂದ ಬಂದಿರುತ್ತವೆ, ಅದರ ಅರ್ಥವು "ರಾಜಕುಮಾರಿ" ಎಂದಾದರೆ, "ಮಿಲ್ಕಾ" ಎಂಬುದು "ರಾಣಿ" ಎಂಬ ಅರ್ಥವಿರುವಂಥ מַלְכָּה *(ಮಲ್ಕಾಹ)* ಎಂಬ ಪದದಿಂದ ಬಂದಿರುತ್ತದೆ. ಪ್ರಾಚೀನ ಮೆಸಪೊತಾಮ್ಯದಲ್ಲಿನ ಅಕ್ಕಡಿಯರ ಭಾಷೆಯಲ್ಲಿ, "*ಸರ್ರಾತು* ಎಂಬವಳು ಸಿನ್ ಎಂಬ ಚಂದ್ರ ದೇವರ ಹೆಂಡತಿಯಾಗಿದ್ದಳು, ಮತ್ತು *ಮಲ್ಕಾತು* ಎಂಬುವಳು ಆತನ ಮಗಳಾಗಿದ್ದಳು."[18] "ಸಾರಯ" (ಸಾರಳು) ಮತ್ತು "ಮಿಲ್ಕಾ" ಎಂಬ ಹೆಸರುಗಳನ್ನು ಅಂಥ ಅನ್ಯಧರ್ಮಿಯ ಪುರಾಣಗಳಿಂದ ತೆಗೆದುಕೊಳ್ಳಲ್ಪಡಬಹುದಾದದ್ದು, ಅನಂತರದಲ್ಲಿ ತೆರಹ, ಅಬ್ರಹಾಮ, ಮತ್ತು ನಾಹೋರರು "ಪೂರ್ವದಲ್ಲಿ [ಯೂಫ್ರೇಟೀಸ್] ಹೊಳೆಯ ಆಚೆಯಲ್ಲಿದ್ದ" ಸಂದರ್ಭದಲ್ಲಿ "ಅನ್ಯದೇವತೆಗಳನ್ನು ಪೂಜಿಸುತ್ತಿದ್ದರು" ಎಂಬ ಯೆಹೋಶುವನ ಹೇಳಿಕೆಗೆ ಸರಿಯಾಗಿ ಹೊಂದಿಕೆಯಾಗುತ್ತದೆ (ಯೆಹೋಶುವ 24:2). ಊರ್ ಮತ್ತು ಹಾರಾನ ಎರಡೂ - ಮೂಲಪಿತೃಗಳ ಕುಟುಂಬದ ಆರಂಭಿಕ ನಿವಾಸಗಳು - ಸಿನ್ ಎಂಬ ಚಂದ್ರ ದೇವರ ಆರಾಧನೆಗೆ ಕೇಂದ್ರಗಳಾಗಿದ್ದವು. ದೇವರು ಏಕೆ ಅಬ್ರಹಾಮನನ್ನು ಆತನ ಸಾಂಸ್ಕೃತಿಕ, ಧಾರ್ಮಿಕ, ಮತ್ತು ಕುಟುಂಬ ಬಂಧಗಳನ್ನು ಮುರಿದುಕೊಂಡು, ಎರಡೂ ಸ್ಥಳಗಳನ್ನು ತೊರೆದು ಕಾನಾನ್ ದೇಶಕ್ಕೆ ಹೋಗಿ ಒಂದು ಹೊಸ ಆರಂಭವನ್ನು ಮಾಡಬೇಕೆಂದು ಏಕೆ ಹೇಳಿದನು ಎಂಬುದಕ್ಕೆ ನಿಶ್ಚಯವಾಗಿಯೂ ಇದು ಸ್ವಲ್ಪ ಮಟ್ಟಿಗೆ ಕಾರಣವಾಗಿತ್ತು.

## ತೆರಹನ ಕುಟುಂಬದ ವಲಸೆ ಹೋಗುವಿಕೆ (11:31, 32)

**31 ತೆರಹನು ತನ್ನ ಮಗನಾದ ಅಬ್ರಾಮನನ್ನೂ ತನಗೆ ಮೊಮ್ಮಗನೂ ಹಾರಾನನಿಗೂ ಮಗನೂ ಆಗಿರುವ ಲೋಟನನ್ನೂ ತನಗೆ ಸೊಸೆಯೂ ಅಬ್ರಾಮನಿಗೆ ಹೆಂಡತಿಯೂ ಆಗಿರುವ ಸಾರಯಳನ್ನೂ ಕರಕೊಂಡು ಕಾನಾನ್‌ದೇಶಕ್ಕೆ ಹೋಗಬೇಕೆಂದು ಕಲ್ದೀಯರ ಊರ್ ಎಂಬ ಪಟ್ಟಣವನ್ನು ಬಿಟ್ಟನು. ಅವರು ಖಾರಾನ್ ಪಟ್ಟಣಕ್ಕೆ ಬಂದು ಅಲ್ಲೇ ವಾಸಮಾಡಿಕೊಂಡರು.**
**32 ತೆರಹನು ಇನ್ನೂರ ಐದು ವರುಷದವನಾಗಿ ಖಾರಾನಿನಲ್ಲಿ ಸತ್ತನು.**

**ವಚನ 31.** ಈ ವಚನವು ವಾಸ್ತವಿಕದಲ್ಲಿ ದೇವರು ಅಬ್ರಹಾಮನನ್ನು **ಕಲ್ದೀಯರ ಊರ್ ಪಟ್ಟಣವನ್ನು** ಬಿಟ್ಟು **ಕಾನಾನ್ ದೇಶಕ್ಕೆ** ಹೋಗುವಂತೆ ಕರೆದನು ಎಂಬುದಾಗಿ ಹೇಳುವದಿಲ್ಲ, ಇದು ಈ ವಿಧದಲ್ಲಿ 15:7, ನೆಹಮೀಯ 9:7, ಮತ್ತು ಅಪೊಸ್ತಲರ ಕೃತ್ಯಗಳು 7:2-4ರಲ್ಲಿ

ಹೇಳಲ್ಪಟ್ಟಿರುತ್ತದೆ. ಈ ಹಂತದಲ್ಲಿ, ಲೇಖಕನು ತನ್ನ ವಾಚಕರಿಗೆ ದೇವರ ಕರೆಯುವಿಕೆಯು ಅಲ್ಲಿ ಸಂಭವಿಸಿರುತ್ತದೆ ಎಂಬುದು ತಿಳಿದಿರುತ್ತದೆಂದು ಭಾವಿಸಿಕೊಳ್ಳುವಂತೆ ಕಾಣಿಸುತ್ತದೆ; ಇಲ್ಲವಾದರೆ, ಆ ಕುಟುಂಬವು ತಮ್ಮ ಸ್ವನಿವಾಸವಾದ ಊರ್ ಪಟ್ಟಣವನ್ನು ತೊರೆದು ಅಪರಿಚಿತವಾದ ದೇಶವೊಂದಕ್ಕೆ ಅಷ್ಟೊಂದು ದೀರ್ಘವಾದ ಹಾಗೂ ಕಠಿಣವಾದ ಪ್ರಯಾಣವನ್ನು ಮಾಡುವದಕ್ಕೆ ಯಾವ ಕಾರಣವೂ ಇರಲಿಲ್ಲ. ಆದಿಕಾಂಡ 11:31 ಸೂಚಿಸುವದೇನೆಂದರೆ, ದೇವರು ಅಬ್ರಹಾಮನಿಗೆ ಅಪ್ಪಣೆ ಕೊಟ್ಟಿದ್ದ ರೀತಿಯಲ್ಲಿ ತನ್ನ ಕುಟುಂಬವನ್ನು ಹಿಂದಕ್ಕೆ ಬಿಟ್ಟು ಹೋಗುವದರ ಬದಲಾಗಿ, **ತೆರಹನು** ತಂದೆಯಾಗಿ ತನಗಿರುವ ಅಧಿಕಾರವನ್ನು ಬಳಿಸಿ **ಕಾನಾನ್‌ದೇಶಕ್ಕೆ ಹೋಗಬೇಕೆಂದು ಅಬ್ರಹಾಮನನ್ನೂ ಲೋಟನನ್ನೂ ಸಾರಯಳನ್ನೂ** ತನ್ನೊಂದಿಗೆ ಕರೆದುಕೊಂಡು ಹೊರಟನು.

ಏನೋ ಒಂದು ಕಾರಣಕ್ಕಾಗಿ, ಈ ಕುಟುಂಬವು ತಕ್ಷಣದಲ್ಲಿ ಪ್ರಯಾಣವನ್ನು ಪೂರ್ತಿಗೊಳಿಸಲಿಲ್ಲ. **ಅವರು ಹಾರಾನ್ ಪಟ್ಟಣಕ್ಕೆ ಬಂದು ಅಲ್ಲೇ ವಾಸಮಾಡಿಕೊಂಡರು** ಎಂಬುದಾಗಿ ವಾಕ್ಯವು ಹೇಳುತ್ತದೆ. "ಹಾರಾನ್" ವಾಯುವ್ಯ ಮೆಸಪೊಟಾಮ್ಯದಲ್ಲಿರುವ ಯೂಫ್ರೇಟಿಸ್ ನದಿಯ ಒಂದು ಉಪನದಿಯ ಬಳಿಯಲ್ಲಿ ಇತ್ತು. ಅದು ಊರ್ ಪಟ್ಟಣದಿಂದ ಕಾನಾನಿಗೆ ಪ್ರಯಾಣಿಸುವ ವೇಳೆ ಅರ್ಧಕ್ಕಿಂತ ಸ್ವಲ್ಪ ದೂರದಲ್ಲಿತ್ತು.

**ವಚನ 32.** ಕುಟುಂಬವು ಅನೇಕ ವರ್ಷಗಳ ಕಾಲ, 205 ವಯಸ್ಸಿನವಾಗಿ **ತೆರಹನು ಸತ್ತು** ಹೋಗುವ ವರೆಗೂ **ಹಾರಾನಿನಲ್ಲಿ** ಉಳಿದುಕೊಂಡರು. ಆಗ ಅಬ್ರಹಾಮನು ಯೆಹೋವನ ಆಜ್ಞೆಗೆ ವಿಧೇಯನಾಗಿ ಕಾನಾನಿಗೆ ಹೋದನು (12:1-3).

ತೆರಹನ ಜೀವಿತದ 205 ವರ್ಷಗಳನ್ನು ಒಂದು ಕಾಲಾನುಕ್ರಮದ ಸಮಸ್ಯೆಯೆಂಬುದಾಗಿ ಕಾಣಲಾಗುತ್ತದೆ. ಕೆಲವರು 11:26ರಲ್ಲಿನ ಹೇಳಿಕೆಯನ್ನು ಅಬ್ರಹಾಮನು ಹುಟ್ಟಿದ ವೇಳೆ ತೆರಹನು 70 ವರ್ಷದವನಾಗಿದ್ದನು ಎಂಬರ್ಥ ನೀಡುತ್ತದೆಂದು ಗ್ರಹಿಸಿಕೊಂಡಿರುತ್ತಾರೆ. ಹಾಗಾದರೆ ಇದರ ಪ್ರಕಾರ ತನ್ನ ತಂದೆಯಾದ ತೆರಹನು ಸತ್ತ ವೇಳೆ ಮತ್ತು ತಾನು ಹಾರಾನ್ ನಗರವನ್ನು ತೊರೆದು ಹೋಗುವ ವೇಳೆ ಅಬ್ರಹಾಮನ ವಯಸ್ಸು 135 ಆಗಿತ್ತು ಎಂದಾಗಿಸುತ್ತದೆ. ಹೇಗೂ, 12:4ನೇ ವಚನವು ಅಬ್ರಹಾಮನು ಹಾರಾನ್ ತೊರೆದು ಕಾನಾನಿಗೆ ಹೊರಡುವ ವೇಳೆ ಆತನ ವಯಸ್ಸು 75 ಆಗಿತ್ತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವದಕ್ಕೆ ಹಲವಾರು ಪರಿಹಾರಗಳು ಸೂಚಿಸಲ್ಪಟ್ಟಿರುತ್ತವಾದರೂ, ಅತ್ಯಂಥ ಪ್ರಾಮುಖ್ಯವಾದವುಗಳಲ್ಲಿ ಕೇವಲ ಎರಡು ಪರಿಹಾರಗಳ ಬಗ್ಗೆ ಮಾತ್ರವೇ ಚರ್ಚಿಸಲಾಗುವುದು.

ಮೊದಲನೆಯ ಪರಿಹಾರವು 11:32ರಲ್ಲಿ ತೆರಹನು ಸತ್ತ ವೇಳೆ ಆತನಿಗಿದ್ದ ವಯಸ್ಸಿಗೆ ಸಂಬಂಧ ಪಟ್ಟಿರುತ್ತದೆ. MT ತರ್ಜುಮೆಯು ಆತನಿಗೆ 205 ವರ್ಷಗಳಾಗಿದ್ದವು ಎಂದು ಹೇಳಿದರೆ, ಸುಮೆರಿಯನ್ ಪಂಚಪುಸ್ತಕದಲ್ಲಿ 145 ಎಂದಿರುತ್ತದೆ. ಕೆಲವು ವೇದ ಪಂಡಿತರು ತಡವಾಗಿ ಬರೆಯಲ್ಪಟ್ಟ ಹಸ್ತಪ್ರತಿಗಳು ಮೂಲ ವಾಕ್ಯದ ಮಾತುಗಳನ್ನು ಪ್ರತಿಫಲಿಸುತ್ತವೆಂಬುದಾಗಿ ಯೋಚಿಸುತ್ತಾರೆ. ಅದನ್ನು ಅನುಸರಿಸುವದಾದರೆ, ತೆರಹನಿಗೆ 70 ವಯಸ್ಸಾಗಿದ್ದ ವೇಳೆ ಅಬ್ರಹಾಮನು ಹುಟ್ಟಿದ್ದನು, ಮತ್ತು ಆತನ ತಂದೆಯು 145 ವಯಸ್ಸಿನಲ್ಲಿ ಮರಣಿಸಿದ ವೇಳೆ ಅಬ್ರಹಾಮನ ವಯಸ್ಸು 75 ಆಗಿರಬಹುದಾಗಿದೆ. ಈ ಪರಿಹಾರವು ಸಮಸ್ಯೆಯನ್ನು ಬಗೆಹರಿಸುವುದು, ಆದರೆ ಸುಮೆರಿಯನ್ನರ ಪಂಚಪುಸ್ತಕವು ಮೂಲ ವಾಕ್ಯವನ್ನು ಸಂರಕ್ಷಿಸಿಕೊಂಡಿರುತ್ತೆಂಬುದು ಸಂದೇಹಕರವಾಗಿದೆ. ವಾಸ್ತವಿಕದಲ್ಲಿ, ಆ ಹಸ್ತಪ್ರತಿಗಳಲ್ಲಿನ ಅನೇಕ ಸಂಖ್ಯೆಗಳು MT ತರ್ಜುಮೆಯಲ್ಲಿರುವದಕ್ಕಿಂತ ವ್ಯತ್ಯಾಸವಾಗಿರುತ್ತವೆ, ಇದು

ಅಬ್ರಹಾಮನು ಹುಟ್ಟಿದ ವೇಳೆ ತೆರಹನಿಗಿದ್ದ ವಯಸ್ಸಿನ ಕುರಿತು ಸಂದೇಹವನ್ನು ಮೂಡಿಸುತ್ತದೆ.

ಸಮಸ್ಯೆಗೆ ಹೆಚ್ಚು ಸಂಭಾವ್ಯವಾದ ಪರಿಹಾರವೆಂದರೆ ಅಬ್ರಹಾಮನು ತೆರಹನ ಚೊಚ್ಚಲ ಮಗನಾಗಿರಲಿಲ್ಲ ಎಂಬುದೆ. ವಂಶಾವಳಿಯ ಪಟ್ಟಿಯಲ್ಲಿರುವ ಹೆಸರುಗಳ ಕ್ರಮವು ಅವಶ್ಯಕವಾಗಿ ಜನನದ ಕ್ರಮಾನುಸಾರವನ್ನು ಪ್ರತಿಫಲಿಸುವದಿಲ್ಲ. ಚೊಚ್ಚಲ ಮಗನಾಗಿರುವದರ ಬದಲಾಗಿ, ಪಟ್ಟಿಯಲ್ಲಿ ಮೊದಲು ಬರೆಯಲ್ಪಟ್ಟಿರುವ ವ್ಯಕ್ತಿಗೆ ದೈವಶಾಸ್ತ್ರಿಕ ಆದ್ಯತೆಯು ಇರಬಹುದಾಗಿದೆ. ಆದದರಿಂದ, 11:26ನೇ ವಚನದ ಅರ್ಥವು ತೆರಹನು 70 ವಯಸ್ಸಿನವಾಗಿದ್ದ ವೇಳೆ ಮಕ್ಕಳನ್ನು ಪಡೆಯುವದಕ್ಕೆ ಆರಂಭಿಸಿದನು ಎಂದಷ್ಟೆ ಆಗಿರಬೇಕು - ಬಹುಶಃ ಹಾರಾನನ್ನು ಪಡೆದನು, ಆತನು ಮೊದಲು ಮರಣಿಸಿದನು (11:28) - ಮತ್ತು ಅಬ್ರಹಾಮನು ತನ್ನ ತಂದೆಗೆ 130 ವರ್ಷಗಳಾದ ಮೇಲಷ್ಟೆ ಜನಸಿದ್ದನು. ಇದರ ಪ್ರಕಾರ ತೆರಹನು ಮರಣಿಸಿದ ವೇಳೆ 205 ವಯಸ್ಸಿನವನಾಗಿದ್ದನು ಮತ್ತು ಅಬ್ರಹಾಮನು ಹಾರಾನ್ ನಗರವನ್ನು ಬಿಟ್ಟು ಹೊರಟ ವೇಳೆ 75 ವಯಸ್ಸಿನವಾಗಿದ್ದನು.

# ಅನ್ವಯಿಸುವಿಕೆ

**ಬಾಬೆಲ್ ಗೋಪುರ (11:1-9)**

ಆದಾಮ ಮತ್ತು ಹವ್ವಳರು ಆರಂಭದಲ್ಲಿ ಅವಿಧೇಯರಾಗುವದರಿಂದ ಮೊದಲ್ಗೊಂಡು ಪ್ರಥಮ ಕುಟುಂಬದಲ್ಲಿ ನಡೆದ ಕೊಲೆ ಹಾಗೂ ಪ್ರಳಯಕ್ಕೆ ದಾರಿ ಮಾಡಿದ ವ್ಯಾಪಕವಾದ ದುಷ್ಟತನಗಳ ಮೂಲಕ ಹಾಯ್ದು ಪಾಪವು ಹೇಗೆ ಹರಡಿಕೊಂಡಿತು ಎಂಬುದರ ಗುರುತನ್ನು ಹಿಡಿದೆವು. ಈ ಘಟನಾವಳಿಗಳು ಸೃಷ್ಟಿಕರ್ತನಿಂದ ದೂರಕ್ಕೆ ಸಾಗುವ ನಿರಂತರವಾದ ಚಲನವಲನವನ್ನು ಬಣ್ಣಿಸುತ್ತದೆ. ಮನುಷ್ಯನು ತನ್ನೊಳಗಿರುವ ದೇವರ ಸ್ವರೂಪವನ್ನು ಹಂತಹಂತವಾಗಿ ಕೆಡಿಸಿಕೊಂಡನು, ಆದರೆ ಬಾಬೆಲ್ ಗೋಪುರವನ್ನು ಕಟ್ಟುವದರೊಂದಿಗೆ, ಒಂದು ನಾಟಕೀಯವಾದ ಬದಲಾವಣೆಯು ಸಂಭವಿಸಿತು. ಇನ್ನು ಮೇಲೆ ಮನುಷ್ಯನ ಭ್ರಷ್ಟತೆಯು ಮುಂಚೂಣಿಯಲ್ಲಿರಲಿಲ್ಲ; ಈಗ ಜನರು ದೇವರ ಕುರಿತಾಗಿ ಹೊಂದಿದ್ದ ತಿರುಚಲ್ಪಟ್ಟ ಅಭಿಪ್ರಾಯಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ನೋಹನ ಸಂತತಿಯವರೊಳಗೆ ಅನೇಕರು - ಈಗಾಗಲೇ ನೈತಿಕವಾಗಿ ಮತ್ತು ಆತ್ಮೀಕವಾಗಿ ದಿವಾಳಿಯಾಗಿದ್ದವರು - ಧಾರ್ಮಿಕವಾಗಿ ಮತ್ತು ದೈವಶಾಸ್ತ್ರೀಕವಾಗಿ ನಿರಾಶ್ರಿತರಾಗಿದ್ದರು ಎಂಬುದು ಬಯಲುಗೊಳ್ಳುತ್ತದೆ. ಅವರು ದೇವರ ಸತ್ಯವಾದ ಸ್ವಭಾವದ ಕುರಿತಾಗಿದ್ದ ಯಾವದೇ ವಾಸ್ತವಿಕವಾದ ತಿಳುವಳಿಕೆಯನ್ನು ಕಳೆದುಕೊಂಡಿದ್ದರು. ಈ ಹಂತದ ವರೆಗೂ, ಆದಿಕಾಂಡದ ಕಥಾನಿರೂಪಣೆಗಳು ಪಾಪ ಹಾಗೂ ನೈತಿಕ ಭ್ರಷ್ಟತೆಯ ಪ್ರಗತಿಯನ್ನು ಪ್ರಕಟಗೊಳಿಸಿರುತ್ತವೆ; ಆದರೆ ಬಾಬೆಲ್ ಗೋಪುರದ ಕಥೆಯು ದೇವರ ಕುರಿತಾಗಿದ್ದ ತಿರುಚಲ್ಪಟ್ಟ ಭಾವನೆಯು ವ್ಯಾಪಕವಾಗಿತ್ತೆಂಬುದನ್ನು ಬಯಲುಗೊಳಿಸುತ್ತದೆ.

*ಕಟ್ಟುವವರ ಗರ್ವ.*

1. ಗೋಪುರ-ಕಟ್ಟುವವರ ಪಾಪವು ಗರ್ವವೇ ಆಗಿತ್ತು, ಅದು ಜನರನ್ನು ದೇವರಿಗೆ ಅವಿಧೇಯರಾಗುವಂತೆ ನಡಿಸಿತು (11:1, 2, 4). ಪ್ರಳಯದ ನಂತರದಲ್ಲಿ, ನೋಹನ ಕುಟುಂಬದ ಸಂತತಿಯವರು ಒಂದೇ ಭಾಷೆಯನ್ನು ಮಾತಾಡುತ್ತಿದ್ದರು. ಮೂಡಣದ ಕಡೆಗೆ ಪ್ರಯಾಣಿಸುವವರಾಗಿ, ಅವರು ಕ್ರಮೇಣದಲ್ಲಿ ಶಿನಾರ್ ದೇಶದಲ್ಲಿ ಸಿಕ್ಕ ಬೈಲುಸೀಮೆಯಲ್ಲಿ

(ಪ್ರಾಚೀನ ಬಾಬಿಲೋನಿನ ಪ್ರಾಂತ್ಯ) ನೆಲೆಗೊಂಡರು. ಆ ಸ್ಥಳದಲ್ಲಿ ಒಟ್ಟಾಗಿ ಇಳಿದುಕೊಂಡು ನೆಲೆಯಾಗುವ ಮೂಲಕ, ಈ ಜನರು ಒಂದು ಐಕ್ಯತೆಯನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸಿದರು. ಈ ನಿರ್ಧಾರವು ದೇವರ ವಿರುದ್ಧವಾಗಿ ಬಂಡಾಯವೇಳುವ ಮೂಲಕ ಮಾಡಲ್ಪಟ್ಟಿತ್ತು, ಆತನು ಅವರಿಗೆ "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" ಎಂದು ಆಜ್ಞಾಪಿಸಿದ್ದನು (9:1; ನೋಡಿರಿ 9:7). ಸ್ಪಷ್ಟವಾಗಿರುವಂತೆ, ಭೇದಗಳ ಬೀಜಗಳು ಈ ಮುಂಚೆಯೇ ಅವರೊಳಗೆ ಇದ್ದವು, ಮತ್ತು ಅವರು ತಾವು "ಭೂಮಿಯ ಮೇಲೆಲ್ಲಾ ಚದರುವ" ಅಪಾಯವಿರುತ್ತದೆಂದು ಗ್ರಹಿಸಿಕೊಂಡಿದ್ದರು (11:4). ಅವರು ಗರ್ವವುಳ್ಳವರಾಗಿ, ತಮ್ಮ ಭೇದಗಳ ಹೊರತಾಗಿಯೂ ತಮ್ಮನ್ನು ಒಗ್ಗಟ್ಟಾಗಿ ಹಿಡಿದಿಟ್ಟುಕೊಳ್ಳಬಹುದಾದ ಒಂದು ಕಟ್ಟಡ ನಿರ್ಮಾಣದ ಯೋಜನೆಯನ್ನು ರೂಪಿಸಿಕೊಳ್ಳುವ ಮೂಲಕ ದೇವರ ಚಿತ್ತವನ್ನು ಭಂಗಪಡಿಸಬಹುದೆಂದು ಯೋಚಿಸಿಕೊಂಡರು. ಇಲ್ಲಿ ಕಲಿಯಬಹುದಾದ ಒಂದು ಪಾಠವು ಏನೆಂದರೆ ನಿಜವಾದ ಐಕ್ಯತೆಯನ್ನು ದೇವರ ಚಿತ್ತಕ್ಕೆ ವಿಧೇಯರಾಗುವದರಿಂದ ಮಾತ್ರವೇ ಸಾಧಿಸಿಕೊಳ್ಳಲು ಸಾಧ್ಯವೇ, ಹೊರತು ಅದಕ್ಕೆ ವಿರುದ್ಧವಾಗಿ ಬಂಡಾಯವೇಳುವದರಿಂದ ಎಂದಿಗೂ ಸಾಧ್ಯವಿಲ್ಲ ಎಂಬುದೆ. ಐಕ್ಯತೆಯಲ್ಲಿರುವ ಒಂದು ಮೂಲಭೂತವಾದ ಘಟಕವೆಂದರೆ ಅದು ಸತ್ಯದಲ್ಲಿ ಪರಿಶುದ್ಧಗೊಳಿಸಲ್ಪಡುವದೇ (ನೋಡಿರಿ ಯೋಹಾನ 17:17-21). ಜ್ಞಾನಿಯು ಹೀಗೆ ಹೇಳಿದನು, "ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿವೆ; ಯೆಹೋವನ ಸಂಕಲ್ಪವೇ ಈಡೇರುವದು" (ಜ್ಞಾನೋಕ್ತಿ 19:21).

2. ಜನರ ಗರ್ವದ ಆಕಾಂಕ್ಷೆಯು ಅವರ ಚಾತುರ್ಯತೆಯಿಂದಾಗಿ ಮತ್ತಷ್ಟು ಬಲಗೊಂಡಿತ್ತು. ಅವರು ಒಂದು ಪಟ್ಟಣ ಮತ್ತು ಆಕಾಶವನ್ನು ಮುಟ್ಟುವಂಥ ಒಂದು ಮಹಾ ನಗರವನ್ನು ನಿರ್ಮಿಸುವ ಯೋಜನೆಯನ್ನು ಆರಂಭಗೊಳಿಸಿದರು. ಖಂಡಿತವಾಗಿಯೂ, ಈ ಕೆಲಸಕ್ಕೆ ಬಹಳಷ್ಟು ಜನರು ಸಾಕಷ್ಟು ಕಾಲದ ತನಕ ಒಗ್ಗಟ್ಟಾಗಿ ಶ್ರಮಿಸುವದು ಅಗತ್ಯವಿತ್ತು. ಯೂಫ್ರೇಟಿಸ್ ಕಣಿವೆಯಲ್ಲಿನ ಫಲವತ್ತಾದ ಮಣ್ಣಿನಲ್ಲಿ ಅವರಿಗೆ ಕಲ್ಲುಗಳು ಸಿಕ್ಕಲಿಲ್ಲವಾದ್ದರಿಂದ, ಅವರು ಹುಲ್ಲು ಹಾಗೂ ಮಣ್ಣನ್ನು ಸಂಗ್ರಹಿಸಿ ಇಟ್ಟಿಗೆಗಳನ್ನು ಮಾಡಿ ಸುಟ್ಟರು. ಆ ಬಳಿಕ ಅವರು ನಿಜವಾದ ನಿರ್ಮಾಣ ಕಾರ್ಯವನ್ನು ಆರಂಭಿಸಿದ್ದರು (11:3, 4).

ಈ ಘಟನೆಗೆ ಪ್ರಚೋದಕನು ನಿಮ್ರೋದನು ಎಂಬುದಾಗಿ ಗುರುತಿಸಲ್ಪಟ್ಟಿದ್ದಾನೆ ಯಾಕೆಂದರೆ ಆತನು "ಪರಾಕ್ರಮದಿಂದ ಮೊದಲನೆಯ ಭೂರಾಜನಾದನು" ಎಂದು ಹೆಸರಿಸಲ್ಪಟ್ಟಿದ್ದಾನೆ ಮತ್ತು "ಬಾಬೆಲ್ … ಅವನ ರಾಜ್ಯದ ಮೂಲ ಪಟ್ಟಣ" ಎಂದು ನಾವು ಓದುತ್ತೇವೆ (10:8, 10). ಹೇಗೂ, ನಿಮ್ರೋದನು ಬಾಬಿಲೋನನ್ನು ಕಟ್ಟುವದರಲ್ಲಿ ಯಶಸ್ವಿಯಾದದ್ದು ಅನಂತರದ ಕಾಲವನ್ನು ಸೂಚಿಸುತ್ತದೆ; ಯಾಕೆಂದರೆ 11:1-9ರಲ್ಲಿ ಮಾಡಿದ ನಿರ್ಮಾಣದ ಪ್ರಯತ್ನವು ಯಶಸ್ವಿಯಾಗಿರಲಿಲ್ಲ, ಮತ್ತು ಜನರು ಎಲ್ಲಾ ಕಡೆಗಳಲ್ಲಿ ಚದುರಿಸಲ್ಪಟ್ಟರು. ನಿಮ್ರೋದನು ಮೂಲ ನಿರ್ಮಾಣಿಕನಾಗಿರಬಹುದು ಮತ್ತು ಯೆಹೋವನು ಆತನ ಆರಂಭಿಕ ಪ್ರಯತ್ನಗಳನ್ನು ಭಂಗಪಡಿಸಿದ ಬಳಿಕ ಸ್ವಲ್ಪ ಕಾಲದ ನಂತರ ಆತನು ಹಿಂದಿರುಗಿ ಬಂದಿರಬಹುದಾದ ಸಾಧ್ಯತೆಯಿರುತ್ತದೆ. ಏನೇ ಆಗಿದ್ದರೂ ಸರಿಯೇ, ಆತನು ಅಂತಿಮವಾಗಿ ಬಾಬೆಲ್, ಮಾತ್ರವಲ್ಲದೆ ಮೆಸಪೊತಾಮ್ಯದ ಇತರ ನಗರಗಳನ್ನು ಕಟ್ಟುವಲ್ಲಿ ಯಶಸ್ಸನ್ನು ಸಾಧಿಸಿದ್ದನು. ಅನಂತರದಲ್ಲಿ ಕಟ್ಟಲ್ಪಟ್ಟ ಬಾಬೆಲ್ ಪಟ್ಟಣ, ಅಥವಾ ಬಾಬಿಲೋನ - ಕ್ರಿ.ಪೂ. ಏಳನೆಯ ಶತಮಾನದ ಕಡೆಯ ಭಾಗದಲ್ಲಿ ಅರಸನಾದ ನೆಬೂಕದ್ನೆಚ್ಚರನ ಆಳ್ವಿಕೆಯಲ್ಲಿ - ಈ ಮುಂಚೆ ಆಗದೆ ಇದ್ದದನ್ನು ಸಾಧಿಸಿತ್ತು: ಪ್ರಸಿದ್ಧಿ ಮತ್ತು ವ್ಯರ್ಥತ್ವ. ಪ್ರಾಚೀನ ಮಧ್ಯಪ್ರಾಚ್ಯವನ್ನು ಗೆದ್ದುಕೊಂಡವರಾಗಿ, ಬಾಬಿಲೋನಿಯರು ಸತ್ಯ ದೇವರ ವಿರುದ್ಧ

ಬಂಡಾಯದ ನೆಲೆಯಾಗಿ ಈ ಪಟ್ಟಣವನ್ನು ಸ್ಥಾಪಿಸಿದರು ಮತ್ತು ಸುಳ್ಳು ದೇವರುಗಳನ್ನು ಆರಾಧಿಸಿದರು (ದಾನಿಯೇಲ 3; 4).

3. ಗರ್ವವು ಕಟ್ಟುವವರನ್ನು ಸ್ವ-ಹೆಚ್ಚಳ ಪಟ್ಟುಕೊಳ್ಳುವಂತೆ ಮತ್ತು ಪ್ರಸಿದ್ಧಿಯನ್ನು ಪಡೆದುಕೊಳ್ಳುವಂತೆ ಉತ್ತೇಜನ ನೀಡಿತ್ತು. ಅವರು ತಮಗೋಸ್ಕರ "ದೊಡ್ಡ ಹೆಸರನ್ನು" ಸಂಪಾದಿಸಿಕೊಳ್ಳಲು ಬಯಸಿದ್ದರು (11:4). ಅವರು ಯಾವದೇ ಪ್ರಳಯವಾಗಲಿ ಇನ್ನು ಮೇಲೆ ತಮ್ಮನ್ನು ಮುಟ್ಟುವದಕ್ಕೆ ಸಾಧ್ಯವಾಗದಷ್ಟು ಎತ್ತರಕ್ಕೆ ಗೋಪುರವನ್ನು ಕಟ್ಟಬೇಕೆಂದು ಬಯಸಿದ್ದರು ಎಂಬುದಾಗಿ ಕೆಲವರು ಊಹಿಸಿಕೊಳ್ಳುತ್ತಾರೆ; ಹೇಗೂ, ಅದೇ ಅವರ ಉತ್ತೇಜನವಾಗಿದ್ದಲ್ಲಿ, ಅವರು ನಿಶ್ಚಯವಾಗಿಯೂ ಆ ಗೋಪುರವನ್ನು ಬಯಲು ಸೀಮೆಯಲ್ಲಿ ಕಟ್ಟುವದರ ಬದಲಾಗಿ ಒಂದು ಪರ್ವತದ ತುದಿಯಲ್ಲಿ ನಿರ್ಮಿಸಿರುತ್ತಿದ್ದರು. ಇನ್ನು ಕೆಲವರು ಆ ಗೋಪುರವು ವಿರೋಧಿಗಳ ದಾಳಿಯಿಂದ ಕಾಪಾಡಿಕೊಳ್ಳುವ ಉದ್ದೇಶಕ್ಕಾಗಿ ಆಗಿತ್ತು ಎಂದು ಭಾವಿಸುತ್ತಾರೆ. ನಂತರದ ಕಾಲಗಳಲ್ಲಿ ಮುತ್ತಿಗೆಯ ಯಂತ್ರಗಳಿಂದ ಹಾಗೂ ದಾಳಿಯಿಡುವ ಸೈನ್ಯಗಳಿಂದ ರಕ್ಷಣೆ ಮಾಡಿಕೊಳ್ಳುವದಕ್ಕೆ ಬಲವಾದ ಗೋಡೆಗಳ ಒಳಗೆ ಗೋಪುರಗಳನ್ನು ಕಟ್ಟಲಾಗುತ್ತಿತ್ತು. ಹೇಗೂ, ಈ ಗೋಪುರವನ್ನು ಕಟ್ಟುವದಕ್ಕೆ ಇದ್ದ ಉದ್ದೇಶವು ತಮ್ಮನ್ನು ಮುಂದೆ ಯಾವ ವೈರಿಗಳು ಬೆದರಿಸದಂತಾಗುವ ಹಾಗೆ ಜನರನ್ನು ಒಂದಾಗಿ, ಐಕ್ಯವಾಗಿ ಮತ್ತು ಬಲಿಷ್ಠವಾಗಿ ಇಟ್ಟುಕೊಳ್ಳುವದೇ ಆಗಿತ್ತೆಂಬುದು ತಿಳಿಸಲ್ಪಟ್ಟಿರುತ್ತದೆ. ಅಂತಿಮವಾಗಿ, ಅವರ ಎಲ್ಲಾ ಪ್ರಯಾಸಗಳು ವ್ಯರ್ಥವಾಗಿದ್ದವು, ಮತ್ತು ಅವರು ಭೂಮಿಯ ಎಲ್ಲಾ ಕಡೆಗಳಿಗೂ ಚದುರಿಸಲ್ಪಟ್ಟರು.

ಈ ಕಥೆಯನ್ನು ಮೊದಲು ಓದಬೇಕೆಂಬ ಉದ್ದೇಶವಿದ್ದಂಥ ಇಸ್ರಾಯೇಲ್ಯರಿಗಾಗಿ ಇದರಲ್ಲಿರುವ ಪಾಠವು ಇದಾಗಿತ್ತು: ಒಂದು ಜನಾಂಗವಾಗಿ ಬದುಕುಳಿಯಬೇಕಾದರೆ, ಅವರು ದೇವರ ಚಿತ್ತಕ್ಕೆ ವಿಧೇಯರಾಗಿ ಜೀವಿಸಬೇಕೇ, ಹೊರತು ಅದಕ್ಕೆ ವಿರುದ್ಧ ಬಂಡಾಯವೇಳುವ ಮೂಲಕ ಅಲ್ಲ. ಅವರು ಯಾಹುವಿಗೆ ಅಪನಂಬಿಗಸ್ತರಾದಲ್ಲಿ ಒಡಂಬಡಿಕೆಯಲ್ಲಿನ ಶಾಪಗಳು ಅವರ ಮೇಲೆ ಬರುವವೆಂದು ಮೋಶೆಯು ಇಸ್ರಾಯೇಲರನ್ನು ಎಚ್ಚರಿಸಿದನು. ಭೂಮಿಯ ಒಂದು ಮೂಲೆಯಿಂದ ಮತ್ತೊಂದು ಮೂಲೆಯ ವರೆಗೂ ಚದುರಿಸಲ್ಪಡುವದರ ಜೊತೆಗೆ, ಈ ಶಾಪಗಳೊಳಗೆ ಅವರು ತಮ್ಮ ವೈರಿಗಳಿಂದ ಸೋಲಿಸಲ್ಪಡುವಿಕೆ ಮತ್ತು ವಾಗ್ದಾನ ದೇಶವನ್ನು ಕಳೆದುಕೊಳ್ಳುವಿಕೆ ಸಹ ಸೇರಿದ್ದವು (ಧರ್ಮೋಪದೇಶಕಾಂಡ 28:15-68). ಅನಂತರದಲ್ಲಿ ಇಸ್ರಾಯೇಲ್ಯರನ್ನು ಆವರಿಸಿಕೊಂಡಿದ್ದ ಸಮಸ್ಯೆಯು ಯಾವದೆಂದರೆ ಬಾಬೆಲ್ ಗೋಪುರ ನಿರ್ಮಾಣದ ಯೋಜನೆಗೆ ನಾಶನವನ್ನು ಉಂಟು ಮಾಡಿದಂಥ ಅದೇ ಸಮಸ್ಯೆಯೇ ಆಗಿತ್ತು: ಗರ್ವ. ಜ್ಞಾನಿಯು ಹೀಗೆ ಬರೆದನು, "ಗರ್ವದಿಂದ ಭಂಗ; ಉಬ್ಬಿನಿಂದ ದೊಬ್ಬು" (ಜ್ಞಾನೋಕ್ತಿ 16:18; ನೋಡಿರಿ 18:12). ಯೇಸುವು ಇದೇ ಸತ್ಯವನ್ನು ಕಲಿಸಿದನು: "ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಮತ್ತಾಯ 23:12).

ಈ ನಿಯಮವು ವ್ಯಕ್ತಿಗಳಿಗೆ ಅನ್ವಯಿಸುವುದು ಮಾತ್ರವೇ ಅಲ್ಲ, ಆದರೆ ಪಟ್ಟಣಗಳಿಗೆ ಮತ್ತು ದೇಶಗಳಿಗೆ ಸಹ ಅನ್ವಯವಾಗುತ್ತದೆ. ನಾವು ಬೃಹತ್ ಪಟ್ಟಣಗಳಲ್ಲಿ ಜನರು ಹೆಚ್ಚೆಚ್ಚು ಸಮೀಪವಾಗಿ ಗುಂಪಿನಲ್ಲಿ ಜೀವಿಸುವಂಥ ಒಂದು ಲೋಕದಲ್ಲಿ ಬದುಕುತ್ತಿದ್ದೇವೆ, ಆದಾಗ್ಯೂ ಅವರು ಎಂದಿಗೂ ಒಬ್ಬಂಟಿಗರಾಗಿರಲಿಲ್ಲ. ಒಂದು ಎದ್ದು ಕಾಣುವ ಕಳವಳ, ಪ್ರತ್ಯೇಕತೆಯ ಮತ್ತು ಸಂಬಂಧವಿಲ್ಲದೆ ಇರುವ ಭಾವ ಇವುಗಳು ತಮ್ಮ ಸ್ವ-ಗುರುತಿನ ಪ್ರಜ್ಞೆಯನ್ನು ಕಳೆದುಕೊಳ್ಳುವಂತೆ ಜನರನ್ನು ನಡಿಸುತ್ತವೆ. ಈ ಗುರುತನ್ನು ಮರಳಿ ಪಡೆದುಕೊಳ್ಳಬೇಕೆಂಬ

ಜನರ ಅನ್ವೇಷಣೆಯು ಅವರನ್ನು ಎದೆಗಾರಿಕೆಯ ಮಹಾ ಸಾಹಸಗಳನ್ನು ಮಾಡುವಂತೆ ಅಥವಾ ತಮ್ಮನ್ನು ಸುದೀರ್ಘವಾಗಿ ಗುಲಾಮಚಾಕರಿಗೆ ಅಧೀನಪಡಿಸಿಕೊಳ್ಳುವಂತೆ ಪ್ರಚೋದಿಸಬಲ್ಲದು; ಇದು ಕೆಲವರನ್ನು ಪ್ರಸಿದ್ಧಿ ಗಳಿಸಬೇಕೆಂಬ ಪ್ರಯತ್ನದಲ್ಲಿ ನಾಚಿಕೆಕರವಾದ ಕೃತ್ಯಗಳ ಮೂಲಕ ಎಲ್ಲರೂ ನೋಡಬೇಕೆಂದು ದೃಶ್ಯಗಳನ್ನು ಹುಟ್ಟು ಹಾಕುವಂತೆ ನಡಿಸುತ್ತದೆ. ಹತಾಶೆಯಲ್ಲಿರುವ ಜೀವಿತಗಳು ಪ್ರಸಿದ್ಧಿಯನ್ನು ಗಳಿಸುವದಕ್ಕೆ ಏನನ್ನಾದರೂ ಮಾಡಲೇ ಬೇಕೆಂಬ ಯೋಚನೆಯಲ್ಲಿ ಕೇಂದ್ರಿಕೃತವಾಗಿರುತ್ತವೆ, ಅದು ನ್ಯಾಯಯುತವಾಗಿ ಆಗಿರಬಹುದು ಅಥವಾ ನ್ಯಾಯಬಾಹಿರವಾಗಿರಬಹುದು. ಹೇಗೂ, ಅಂಥ ಘನತೆಯು ಶೀಘ್ರವೇ ಕಾಣಿಸದೆ ಹೋಗುವುದು ಯಾಕೆಂದರೆ ಅದಕ್ಕೆ ಯಾವದೇ ನಿಜವಾದ ಭದ್ರತೆಯು ಇರುವದಿಲ್ಲ - ಕೇವಲ ಏಕಾಂಗಿತನ, ಕಹಿಭಾವನೆ, ಮತ್ತು ಶೂನ್ಯತೆ ಸಿಕ್ಕುತ್ತವೆ. ವೆಸ್ಟಮಿನಿಸ್ಟರ್ ನಂಬಿಕೆಯ ಅರಿಕೆಯು ಹೀಗೆ ಹೇಳುತ್ತದೆ, "ಮನುಷ್ಯನ ಪ್ರಮುಖ ಗುರಿಯು ದೇವರನ್ನು ಮಹಿಮೆ ಪಡಿಸುವದು ಮತ್ತು ಆತನನ್ನು ಸದಾಕಾಲವೂ ಆನಂದಿಸುವದೇ ಆಗಿರುತ್ತದೆ."[19] ಎಲ್ಲಿಯ ತನಕ ಜನರು ಮತ್ತು ದೇಶಗಳು ಕೇವಲ ತಮ್ಮನ್ನೇ ಮಹಿಮೆಪಡಿಸಿಕೊಳ್ಳಬೇಕು ಎಂದು ಅಪೇಕ್ಷಿಸುತ್ತವೋ, ಅಲ್ಲಿಯ ವರೆಗೂ ಅವರು ಅರ್ಥವಿಲ್ಲದ ಜೀವಿತಗಳ ಅಭದ್ರತೆಯೊಳಗೆ ತಮ್ಮನ್ನು ಕಳೆದುಕೊಳ್ಳುತ್ತಲೇ ಇರುವರು.

*ಅವರ ಅವಿಧೇಯತೆಗೆ ದೇವರ ಪ್ರತಿಕ್ರಿಯೆ.*

1. ದೇವರು ಮನುಷ್ಯರ ಗರ್ವದ, ಅವಿಧೇಯಕರ ಕೃತ್ಯಗಳಿಗೆ ಒಂದು ದೃಢವಾದ ಪ್ರತಿಕ್ರಿಯೆಯನ್ನು ನೀಡಿದನು. ಆತನು ಬಾಬೆಲಿನ ಪಾಪಭರಿತ ಜನರಲ್ಲಿದ್ದ ದುರಹಂಕಾರದ ಕೃತ್ಯಗಳನ್ನು ಕುರಿತು ತನಿಖೆ ಮಾಡಿದನು (11:5). "ಆ ಪಟ್ಟಣವನ್ನೂ ಗೋಪುರವನ್ನೂ ನೋಡುವದಕ್ಕೆ ಯೆಹೋವನು ಇಳಿದು ಬಂದನು" ಎಂಬ ಹೇಳಿಕೆಯು ದೇವರ ಕೃತ್ಯಗಳನ್ನು ಮಾನವ ಯೋಚನೆ ಹಾಗೂ ವ್ಯಕ್ತಪಡಿಸುವಿಕೆಯ ವಿಧಾನಗಳಿಗೆ ತಕ್ಕಂತೆ, ಹೊಂದಾಣಿಕೆಯ ಭಾಷೆಯನ್ನು ಬಳಸುತ್ತದೆ. ದೇವರು ಮಾನವ ವ್ಯವಹಾರಗಳಲ್ಲಿ ಆಸಕ್ತಿಯನ್ನು ತೋರಿ ಅದರಲ್ಲಿ ಭಾಗವಹಿಸುವದನ್ನು ಸೂಚಿಸಲು ಬಳಸಿರುವ ಈ ಸಾಹಿತ್ಯಕ ಕಲಾತಂತ್ರವು ಆತನು ಮಧ್ಯಪ್ರವೇಶಿಸುವದನ್ನು ನಾಟಕೀಯಗೊಳಿಸುವದಕ್ಕಾಗಿ ಬಳಸಲ್ಪಟ್ಟಿದೆ. ಯೆಹೋವನು ಅವರ ಕೆಲಸವನ್ನು ನೋಡುವದಕ್ಕಾಗಿ ಇಳಿದು ಬರುವ ಚಿತ್ರಣವು ಸಹ ಆತನಿಗೆ ಅವರ ಚಟುವಟಿಕೆಗಳ ಬಗ್ಗೆ ಮುಂಚೆಯೇ ತಿಳಿದಿತ್ತು ಎಂಬುದನ್ನು ಪ್ರತಿಬಿಂಬಿಸುತ್ತದೆ. ಖಂಡಿತವಾಗಿಯೂ, ದೇವರು ಅವರ ಕೆಲಸವನ್ನು ಪರೀಕ್ಷಿಸುವದಕ್ಕಾಗಿ ಅಕ್ಷರಶಃ ಇಳಿದು ಬರಲಿಲ್ಲ. ಆತನು ಇದೇ ವಿಧವಾದ ಅವಿಧೇಯತೆಯ ಕೃತ್ಯಕ್ಕೆ ಪ್ರತಿಕ್ರಿಯಿಸಿದಂಥ ಇನ್ನೊಂದು ವಾಕ್ಯಭಾಗದಲ್ಲಿ ಇದು ಒತ್ತಿ ಹೇಳಲ್ಪಟ್ಟಿದೆ. ಕೀರ್ತನೆ 2:4 ಹೀಗೆ ಹೇಳುತ್ತದೆ, "ಪರಲೋಕದಲ್ಲಿ ಆಸನಾರೂಢನಾಗಿರುವಾತನು ಅದಕ್ಕೆ ನಗುವನು ಕರ್ತನು ಅವರನ್ನು ಪರಿಹಾಸ್ಯಮಾಡುವನು." ಸರಳವಾಗಿ ಹೇಳುವದಾದರೆ, ಮಾನವರ ಯೋಜನೆಗಳ ಹಾಗೂ ಕೃತ್ಯಗಳ ಬಗ್ಗೆ ಆತನಿಗೆ ಪೂರ್ಣ ತಿಳುವಳಿಕೆಯಿರುತ್ತದೆ, ಆದಾಮ ಮತ್ತು ಹವ್ವಳರನ್ನು ಎಲ್ಲಿದ್ದೀರಿ ಎಂದು ಪ್ರಶ್ನಿಸುವದಕ್ಕೆ ಮುನ್ನ ಅವರು ಇರುವಂಥ ಸ್ಥಳವು ಆತನಿಗೆ ಗೊತ್ತಿದ್ದ ರೀತಿಯಲ್ಲಿಯೇ ಇದಾಗಿರುತ್ತದೆ (3:9, 13). ಯೆಹೋವನು ಹೇಬೆಲನು ಎಲ್ಲಿ ಎಂದು ಕಾಯಿನನ್ನು ವಿಚಾರಿಸಿದಾಗ ಅದು ಅಷ್ಟೇ ಸತ್ಯವಾಗಿತ್ತು (4:9, 10). ಅದೇ ರೀತಿಯಲ್ಲಿಯೇ, ಬಾಬೆಲಿನ ಜನರ ಯೋಜನೆಗಳ ಬಗ್ಗೆ ಮತ್ತು ಅವರನ್ನು ಉತ್ತೇಜಿಸಿದ ದುರಹಂಕಾರದ ಬಗ್ಗೆ ಆತನಿಗೆ ಗೊತ್ತಿತ್ತು (ನೋಡಿರಿ ಕೀರ್ತನೆ 139:1-6).

2. ಸಾಮೂಹಿಕ ವಿಶ್ವಾಸ ಭ್ರಷ್ಟತೆಯ ಅಪಾಯದ ಕುರಿತು ದೇವರಿಗೆ ತಿಳಿದಿತ್ತು (11:6,

7). ಮನುಷ್ಯರಿಗೆ ಒಟ್ಟಾಗಿ, ದೇವರ ವಿರುದ್ಧ ಒಗ್ಗಟ್ಟಿನಿಂದ ಬಂಡಾಯವೆದ್ದವರಾಗಿ ಜೀವಿಸುವಂತೆ ಅವಕಾಶವನ್ನು ಕೊಟ್ಟಿದ್ದಲ್ಲಿ, ಅವರನ್ನು ಇನ್ನುಷ್ಟು ದೊಡ್ಡ ಬಂಡಾಯದ ಕೃತ್ಯಗಳನ್ನು ಮತ್ತು ಯೆಹೋವನಿಗೆ ವಿರುದ್ಧವಾಗಿ ಅವಿಧೇತೆಯ ಕೃತ್ಯಗಳನ್ನು ಮಾಡುವಂತೆ ನಡಿಸಬಹುದಾಗ ಅಧಿಕಾರದ ಒಂದು ಮಿಥ್ಯ ಪ್ರಜ್ಞೆಯನ್ನು ಅವರಲ್ಲಿ ಬೆಳೆಸಿಕೊಳ್ಳುವರು. ಒಂದು ಅರ್ಥದಲ್ಲಿ, ಆಕಾಶಕ್ಕೆ ಮುಟ್ಟುವಂಥ ಗೋಪುರವೊಂದನ್ನು ನಿರ್ಮಿಸುವ ಮೂಲಕ, ಬಾಬೆಲಿನ ಜನರು ಆಕಾಶದ ದ್ವಾರದೊಳಗೆ ನುಗ್ಗುವದಕ್ಕೆ ಪ್ರಯತ್ನಿಸುತ್ತಿದ್ದರು. ಅವರು ಈಗಲೂ ದೇವರಿಂದ ಕೊಡಲ್ಪಟ್ಟಿರುವ ಎಲ್ಲೆಗಳನ್ನು ಮೀರುವದಕ್ಕೆ ಪ್ರಯತ್ನಿಸುತ್ತಿದ್ದರು, ಅವರಿಗೆ ಸೇರಿದ್ದಲ್ಲದ ಸಂಗತಿಯನ್ನು ಹಿಡಿದುಕೊಳ್ಳಲು ಅಪೇಕ್ಷಿಸುತ್ತಿದ್ದರು, ಮತ್ತು ಯೆಹೋವನಿಂದ ಜಾರಿಗೆ ತರಲ್ಪಟ್ಟಿರುವ ಮಿತಿಗಳನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಒಂದು ಸಮುದಾಯವಾಗಿ, ಅವರು ಭೂಲೋಕದವುಗಳ ಮತ್ತು ಪರಲೋಕದವುಗಳ ನಡುವಿನ ಅವಶ್ಯಕವಾದ ಪ್ರತ್ಯೇಕತೆಯು ಸೇರಿದಂತೆ, ದೇವರ ಪರಿಶುದ್ಧತೆ ಮತ್ತು ಪರಮೋತ್ಕೃಷ್ಠತೆಯನ್ನು ತಿರಸ್ಕರಿಸಿದ್ದರು.

ಬಾಬೆಲ್ ಜನರ - ಮತ್ತು ಇಂದು ಬಹಳಷ್ಟು ಮಾನವರ - ಮಹಾ ಪಾಪವು ಯಾವದೆಂದರೆ ದೇವರನ್ನು ದೇವರೆಂದು ಗುರುತಿಸುವಲ್ಲಿ ವಿಫಲರಾಗಿರುವದೇ ಆಗಿದೆ! ದುರ್ಬಲ ಹಾಗೂ ಪಾಪಭರಿತ ಮಾನವ ಜೀವಿಗಳಾಗಿ, ನಾವು ಕೆಲವು ಸಾರಿ ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ನಮ್ಮ ಇಷ್ಟಗಳ ಪ್ರಕಾರ ದೇವರನ್ನು ಸಂಧಿಸುವದಕ್ಕೆ ಅಥವಾ ಆತನ ಸ್ಥಾನವನ್ನು ಆಕ್ರಮಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತೇವೆ. ಏದೆನ್ ತೋಟದಲ್ಲಿ ಪಾಪವು ಸಂಭವಿಸಿದ ದಿನದಿಂದಲೂ, ಮಾನವನಿಗಿರುವ ಅತ್ಯಂಥ ದೊಡ್ಡ ಶೋಧನೆಯೆಂದರೆ ಅದು ದೈವತ್ವವನ್ನು ದುರಾಶೆಯಿಂದ ಕಸಿದುಕೊಳ್ಳಬೇಕೆಂಬುದೆ ಆಗಿರುತ್ತದೆ.

ಪಾಪದ ಮೂಲವು ಗರ್ವ, ಅದು ಬಂಡಾಯಕ್ಕೆ ನಡಿಸುತ್ತದೆ; ಮತ್ತು ಅಂತಿಮವಾಗಿ ಅದು ಯೆಹೋವನ ಒಡೆಯತ್ವದ ವಿರುದ್ಧವೇ ಬಂಡಾಯ ಏಳುವದಾಗಿದೆ. ದೇವರಿಲ್ಲದೆ ಸ್ವಯಮಾಧಿಪತ್ಯದ ಹಕ್ಕು ಸಾಧಿಸುವದೇ ಗರ್ವ, ಆಕಾಶ ಮತ್ತು ಭೂಮಿಗಳನ್ನು ಉಂಟು ಮಾಡಿರುವ ಸೃಷ್ಟಿಕರ್ತನ ಮೇಲೆ ಅವಲಂಬರಾಗಿದ್ದೇವೆಂಬುದನ್ನು ಒಪ್ಪಿಕೊಂಡು ಆತನಿಗೆ ಅಧೀನರಾಗಲು ನಿರಾಕರಿಸುವದೇ ಗರ್ವ ಆಗಿರುತ್ತದೆ. ಬಾಬೆಲ್ ಗೋಪುರವು ಮನುಷ್ಯನ ಶ್ರೇಷ್ಠತೆಯನ್ನು ತೋರಿಸುವ ಉದ್ದೇಶದಿಂದ ಕಟ್ಟಿದ ವಾಸ್ತುಶಿಲ್ಪದ ಸಾಧನೆಯಾಗಿತ್ತು. ಅದು ಯಶಸ್ವಿಯಾಗಿದ್ದಲ್ಲಿ ಅದು ಕಟ್ಟುವವರಿಗೆ ಭದ್ರತೆಯ ಹಾಗೂ ಅವರ ಅಂತ್ಯಾವಸ್ಥೆಯನ್ನು ನಿಯಂತ್ರಿಸಿಕೊಳ್ಳಬಹುದು ಎಂಬ ಒಂದು ಸುಳ್ಳು ಪ್ರಜ್ಞೆಯನ್ನು ಕೊಟ್ಟಿರುವದಕ್ಕೆ ಸಾಧ್ಯವಿತ್ತು.

ಒಂದು ರೀತಿಯಲ್ಲಿ ಇದೇ ವಿಧವಾಗಿಯೇ, ಈ ದಿನ ಜನರು ಮಿಲಿಟರಿ ಶಕ್ತಿ, ವೈಜ್ಞಾನಿಕ ಸಾಧನೆಗಳಲ್ಲಿ, ಮತ್ತು ತಾಂತ್ರಿಕ ಪ್ರಗತಿಗಳಲ್ಲಿ ಭರವಸವನ್ನಿಡುವ ಪ್ರಲೋಭನೆಗೆ ಒಳಗಾಗಿರುತ್ತಾರೆ. ಇವುಗಳು ದೇವರ ಸಹಾಯವಿಲ್ಲದೆಯೇ ಒಂದಿಷ್ಟರ ಮಟ್ಟಿಗೆ ಸಮಾಧಾನ, ಭದ್ರತೆ, ಮತ್ತು ದೀರ್ಘಾಯುಷ್ಯ ಇವುಗಳನ್ನು ಒದಗಿಸುವಂತೆ ತೋರಬಹುದು. ನಾವು ಜೀವಿತದ ಅನೇಕ ಕ್ಷೇತ್ರಗಳಲ್ಲಿ ಆಧುನಿಕ ಅಭಿವೃದ್ಧಿಗಳಾಗಿರುವದಕ್ಕೆ ಕೃತಜ್ಞೆಯಿಂದಿರಬಹುದು; ಹೇಗೂ, ಅವುಗಳನ್ನು ನಮ್ಮ ದೇವರುಗಳಾಗಿರುವದಕ್ಕೆ ತಪ್ಪು ದಾರಿಗೆ ಸೆಳೆಯುವ ಪ್ರಯತ್ನಗಳಾಗುವಂತೆ ಅವಕಾಶವನ್ನು ಕೊಡುವದದಂತೆ ನಾವು ಎಚ್ಚರಿಕೆಯಿಂದಿರತಕ್ಕದ್ದು. ಮನುಷ್ಯನು ತನ್ನ ಸ್ವಂತ ಸೃಜನಾತ್ಮಕ ಚಾತುರ್ಯತೆಯಿಂದ ಆಕಾಶಕ್ಕೆ ಏರಿ ಹೋಗಲಾರನು. ಒಬ್ಬನು ಎಷ್ಟು ಹೆಚ್ಚಾಗಿ ದೇವರಾಗಬೇಕೆಂದು ಪ್ರಯತ್ನಿಸುತ್ತಾನೋ, ಅಷ್ಟೇ ಹೆಚ್ಚಾಗಿ ಆತನು ಸೈತಾನನಂತೆ ಆಗುವನು.

3. ಬಾಬೆಲಿನ ಜನರ ಮೇಲೆ ದೇವರ ನ್ಯಾಯತೀರ್ಪು ಬಂದಿತು. ಆತನು ಅವರ ಭಾಷೆಯನ್ನು ಗಲಿಬಿಲಿಗೊಳಿಸಿ ಅವರನ್ನು "ಭೂಲೋಕದಲ್ಲೆಲ್ಲಾ ಚದುರಿಸಿದನು," ಅವರು ಬಂಡಾಯವೇಳಲು ಮಾಡಿದ ಒಗ್ಗಟ್ಟಾದ ಪ್ರಯತ್ನವನ್ನು ಭಂಗಪಡಿಸಿದನು (11:7-9). ಹೇಗೂ, ಈ ಘಟನೆಯಲ್ಲಿ ದೇವರ ಕರುಣೆಯು ಸಹ ಸ್ಪಷ್ಟವಾಗಿ ಕಾಣಿಸಿತ್ತು. ಮತ್ತೊಂದಾವರ್ತಿ, ಆದಾಮ ಮತ್ತು ಹವ್ವಳರ, ಕಾಯಿನ, ಹಾಗೂ ಪ್ರಳಯಪೂರ್ವ ಜಗತ್ತಿನ ಘಟನೆಗಳಲ್ಲಿದ್ದ ರೀತಿಯಲ್ಲಿಯೇ, ಗೋಪುರದ ಘಟನೆಯಲ್ಲಿ ಸಹ ನ್ಯಾಯತೀರ್ಪಿನ ನಡುವೆಯೂ ದೇವರ ಕೃಪೆಯನ್ನು ಕಾಣುತ್ತೇವೆ. "ಪಾಪದ ಸಂಬಳವು [ಸಂಪಾದಿಸಿಕೊಂಡ ದಂಡನೆ] ಮರಣ" ಆಗಿರುತ್ತದಾದರೂ (ರೋಮಾ 6:23; ನೋಡಿರಿ ಆದಿಕಾಂಡ 2:17), ಇತಿಹಾಸದುದ್ದಕ್ಕೂ ದೇವರು ಮರಣಕ್ಕೆ ಯೋಗ್ಯರಾದ ಜನರಿಗೆ ಇನ್ನಷ್ಟು ಜೀವಿಸುವ ವರ್ಷಗಳನ್ನು, ಪಶ್ಚಾತ್ತಾಪ ಪಡುವದಕ್ಕಾಗಿ ಮತ್ತಷ್ಟು ಸದವಕಾಶಗಳನ್ನು ಒದಗಿಸಿರುತ್ತಾನೆ. ಯೆಹೋವನು ಒಬ್ಬ ವ್ಯಕ್ತಿಯು ಭೂಮಿಯ ಮೇಲೆ ನಡಿಸುವ ಶಾರೀರಿಕ ಜೀವಿತದ ಅವದಿಯಲ್ಲಿಯೇ ಆತನ ಸಕಲ ಕೃತ್ಯಗಳಿಗೆ ಲೆಕ್ಕವನ್ನು ಸರಿ ಮಾಡುವದಿಲ್ಲ. ಪಾಪಭರಿತ ಮಾನವರ ಕಡೆಗೆ ಆತನು ದೀರ್ಘಶಾಂತಿಯುಳ್ಳವನಾಗಿದ್ದಾನೆ, ತಾನು ತನ್ನ ಸ್ವರೂಪದಲ್ಲಿ ಉಂಟು ಮಾಡಿರುವ ಅವರು ಶಾಶ್ವತವಾಗಿ ನಾಶವಾಗಬಾರದೆಂದು ಅವರನ್ನು ಯಾವಾಗಲೂ ಪಶ್ಚಾತ್ತಾಪಕ್ಕೆ ಕರೆಯುತ್ತಲಿರುತ್ತಾನೆ (2 ಪೇತ್ರ 3:9-13).

ಪ್ರಾಚೀನ ಬಾಬೆಲಿನ ಜನರು ಆತನಿಗೆ ಪ್ರತಿಕ್ರಿಯಿಸುವಂತೆ ದೇವರು ಅವರನ್ನು ಒತ್ತಾಯಿಸಲಿಲ್ಲ, ಮತ್ತು ಈ ದಿನವೂ ಜನರನ್ನು ಆತನು ತನಗೆ ವಿಧೇಯರಾಗಬೇಕೆಂದು ಒತ್ತಾಯಿಸುವವನಲ್ಲ. ಬೈಬಲಿನುದ್ದಕ್ಕೂ ಅಗಾಧವಾಗಿ ಆವರಿಸಿಕೊಂಡಿರುವ ಸಂದೇಶವು ಏನೆಂದರೆ ದೇವರು ಪಾಪಿಗಳನ್ನು ಪ್ರೀತಿಸುತ್ತಾನೆ ಎಂಬುದೆ. ಅವರನ್ನು ನಾಶಗೊಳಿಸಬೇಕೆಂದು ಅಲ್ಲ, ಆದರೆ ರಕ್ಷಿಸಬೇಕೆಂದು ಬಯಸುತ್ತಾನೆ. ಈ ದೈವಿಕ ಪ್ರೀತಿಯ ಪರಮೋಚ್ಛ ಪ್ರದರ್ಶನವು ಯೇಸು ಕ್ರಿಸ್ತನಲ್ಲಿಯೇ ತೋರಿ ಬಂದಿತು (ಯೋಹಾನ 3:16-22; 5:24-29). ಪೌಲನು ನಮ್ಮ ಕೃತ್ಯಗಳಿಗೆ ತಕ್ಕ ಹಾಗೆ "ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" ಎಂದು ಹೇಳಿದನಾದರೂ (2 ಕೊರಿಂಥ 5:10), ದೇವರ "ದಯೆ" ಪ್ರಾಥಮಿಕವಾಗಿ ಮನುಷ್ಯರನ್ನು ಪಶ್ಚಾತ್ತಾಪ ಪಡುವಂತೆ ನಡಿಸುತ್ತದೆಂಬುದನ್ನು ಸಹ ಆತನು ದೃಢಪಡಿಸಿದನು (ರೋಮಾ 2:4-8).

---

ಅಡಿಟಿಪ್ಪಣಿಗಳು

[1]*The Creation Epic* 6.52, 54, 58, 75. [2]ಸುಮೆರಿಯನ್ನರ ಕಥೆಯು "Enmerkar and the Lord of Aratta" ಎಂದು ಕರೆಯಲ್ಪಟ್ಟಿರುತ್ತದೆ. ಈ ವಾಕ್ಯದ ಅನುವಾದವೊಂದಕ್ಕಾಗಿ, ನೋಡಿರಿ William W. Hallo, ed., *The Context of Scripture* (Boston: Brill, 2003), 1:547–50. [3]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 236–37. [4]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 869. [5]ನೋಡಿರಿ 10:10; 11:2, 9; ಯೆಶಾಯ 11:11; ದಾನೀಯೇಲ 1:2; ಜೆಕರ್ಯ 5:11. LXX "ಶಿನಾರ್" ಎಂಬುದನ್ನು ಯೆಶಾಯ 11:11ರಲ್ಲಿ "ಬಾಬಿಲೋನ" ಎಂದು ಮತ್ತು ಜೆಕರ್ಯ 5:11ರಲ್ಲಿ "ಬಾಬಿಲೋನ ದೇಶದಲ್ಲಿ" ಎಂದು ಅನುವಾದಿಸುತ್ತದೆ. [6]Herodotus *Histories* 1.181. [7]ನೋಡಿರಿ ಆದಿಕಾಂಡ 6:4, ಇಲ್ಲಿ "ಹೆಸರುಗೊಂಡವರು" ಎಂಬುದರ ಅಕ್ಷರಶಃ ಅರ್ಥವು "ಹೆಸರು ಉಳ್ಳವರು" ಎಂದಾಗಿರುತ್ತದೆ, ಅಂದರೆ ಅವರು ಹಿಂಸೆ ಮತ್ತು ದುಷ್ಟತನಕ್ಕೆ ಹೆಸರಾದವರು (ಪ್ರಸಿದ್ಧಿ) ಆಗಿದ್ದರು ಎಂಬುದೆ (6:5, 11). ಈ ಮಾತಿನಲ್ಲಿ

ಪ್ರಸಿದ್ಧರಾಗಬೇಕೆಂಬ ಯೋಚನೆಯು ಸೇರಿರುತ್ತದೆ ಮತ್ತು ಅದು ಒಳ್ಳೇ ಅರ್ಥದಲ್ಲಿ ಬಳಸಲ್ಪಡುತ್ತದೋ ಅಥವಾ ಕೆಟ್ಟ ಅರ್ಥದಲ್ಲೋ ಎಂಬುದಾಗಿ ಉದ್ದೇಶ ಹಾಗೂ ಕೃತ್ಯದ ಮೇಲೆ ಆಧಾರವಾಗಿರುತ್ತದೆ (ನೋಡಿರಿ 2 ಸಮುವೇಲ 8:13; ನೆಹಮೀಯ 9:10; ಯೆರೆಮೀಯ 32:20). ಆದಿಕಾಂಡ 6:4ರಲ್ಲಿ, ಇಂಗಿತವು ದೇವರ ಚಿತ್ತಕ್ಕೆ ವಿರುದ್ಧವಾದದ್ದು ಎಂಬುದು ಸ್ಪಷ್ಟವಾಗಿರುತ್ತದೆ. [8]Jeffrey S. Rogers, "Babel, Tower of," in *Eerdmans Dictionary of the Bible*, ed. David Noel Freedman (Grand Rapids, Mich.: Wm. B. Eerdmans Publishing Co., 2000), 138. [9]David F. Payne, "Babel, Tower of," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:382. [10]11ನೇ ಅಧ್ಯಾಯವು ನೋಹನ ಹೆಸರನ್ನು ಒಳಗೊಂಡಿರುವದಿಲ್ಲ; ಹೇಗೂ, ಮತ್ತಾಯನು ಯೆಕೊನ್ಯನನ್ನು (ಯೆಹೋವಾಕೀನ) ಎರಡು ಸಾರಿ ಲೆಕ್ಕಿಸಿದ ವೇಳೆ ಇದೇ ವಿಧಾನವನ್ನು ಬಳಸಿದನು: ಒಂದು ಪೂರ್ಣವಿರಾಮದ ಅಂತ್ಯದಲ್ಲಿ ಮತ್ತು ಮುಂದಿನ ಸಾಲಿನ ಆರಂಭದಲ್ಲಿ ಇನ್ನೊಂದನ್ನು ಬಳಸುತ್ತಾನೆ (ಮತ್ತಾಯ 1:11, 12).

[11]ಲೂಕ 3:34-38ರಲ್ಲಿ, ಅಬ್ರಹಾಮನನ್ನು ಆದಾಮನಿಂದ ಇಪ್ಪತ್ತೊಂದನೆಯ ತಲೆಮಾರಿನವನು ಎಂಬುದಾಗಿ ಪಟ್ಟಿ ಮಾಡಲಾಗಿದೆ, ಯಾಕೆಂದರೆ ವಂಶಾವಳಿಗಳು ಯಾವಾಗಲೂ ಒಂದೇ ವಿಧದಲ್ಲಿ ಲೆಕ್ಕಿಸಲ್ಪಡುತ್ತಿರಲಿಲ್ಲ. ಅವುಗಳಲ್ಲಿ ಅನೇಕ ಸಾರಿ ಆಯ್ದ ವ್ಯಕ್ತಿಗಳನ್ನು ಸೇರಿಸಲಾಗುತ್ತಿತ್ತು, ಕಡಿಮೆ ಮಹತ್ವವಿರುವ ಹೆಸರುಗಳನ್ನು ಕೈ ಬಿಟ್ಟ ಕಡೆಗಳಲ್ಲಿ ಅಂತರಗಳನ್ನು ಬಿಡಲಾಗುತ್ತಿತ್ತು. [12]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 488ರಲ್ಲಿನ ವಂಶಾವಳಿಯ ನಕ್ಷೆಗಳನ್ನು ನೋಡಿರಿ. [13]John T. Willis, *Genesis*, The Living Word Commentary (Austin, Tex.: Sweet Publishing Co., 1979), 200. [14]Brown, Driver, and Briggs, 974. [15]Richard S. Hess, "Serug," in *The Anchor Bible Dictionary*, ed. David Noel Freedman (New York: Doubleday, 1992), 5:1117–18. [16]Yoshitaka Kobayashi, "Haran," in *The Anchor Bible Dictionary*, 3:58. [17]John H. Walton, "Genesis," in *Zondervan Illustrated Bible Backgrounds Commentary*, vol. 1, *Genesis, Exodus, Leviticus, Numbers, Deuteronomy*, ed. John H. Walton (Grand Rapids, Mich.: Zondervan, 2009), 61–63ರಲ್ಲಿ ಊರ್ ಪಟ್ಟಣದಲ್ಲಿದ್ದ ಹಂತಗೋಪುರ ದೇವಾಲಯದ ಚಿತ್ರಗಳನ್ನು, ಮಾತ್ರವಲ್ಲದೆ ಬಾಬಿಲೋನಿನಲ್ಲಿದ್ದ ಹಂತಗೋಪುರ ದೇವಾಲಯದ ಮರುಸೃಷ್ಟಿಯ ಚಿತ್ರಗಳನ್ನು ಸಹ ನೋಡಿರಿ. [18]Wenham, 273. [19]*The Westminster Confession of Faith*, with Introduction and Notes by John Macpherson (Edinburgh: T. & T. Clark, 1881), 123.